ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಮಂಗಳವಾರ ಎನೇ ಆಗಸ್ಟ್ ೧೯೯೫, ಸಾಯನಸೌರ ಶ್ರಾವಣ, ಶಕ ೧೯೧೭

ಸದನವು ವಿಧಾನ ಸೌಧದಲ್ಲಿರುವ ವಿಧಾನಸಭೆಯ ಸಂಭಾಂಗಣದಲ್ಲಿ

ಬೆಳಿಗ್ಗೆ ೧೧-೧೦ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : **(ಶ್ರೀ ರಮೇಶ್ ಕುಮಾರ್)** ಅವರು ಪೀಠವನ್ನು ಅಲಂಕರಿಸಿದ್ದರು.

ಅಧ್ಯಕ್ಷರ—ಅಪ್ಪಣೆ—ಕೋರಿ ಪ್ರಸ್ತಾಪ

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಸನ್ಮಾನ್ಯ ಅಧ್ಯಕ್ಷರೆ, ನಿನ್ನೆಯ ದಿವಸ ಮಾನ್ಯ ವಿರೋಧ ಪಕ್ಷದ ನಾಯಕರು ಸರ್ಕಾರದ ವಿರುದ್ಧ ಅವಿಶ್ವಾಸ ನಿರ್ಣಯವನ್ನು ಮಂಡಿಸಿ, ಕೆಲವು ಪತ್ರಿಕಾ ವರದಿ ಆಧಾರದ ಮೇಲೆ ಸಭಾನಾಯಕರು, ಮತ್ತು ಈ ಸಭೆಯ ಸದಸ್ಯರಾದ ಶ್ರೀಮಾನ್ ರೇವಣ್ಣನವರ ಬಗ್ಗೆ ಸುದೀರ್ಘವಾಗಿ ಮಾತನಾಡಿದಂಥ ಸಂದರ್ಭದಲ್ಲಿ ಚರ್ಚೆಯು ಬೇರೆ ದಿಕ್ಕನ್ನು ತಲುಪಿತು. ಕೊನೆಯವರೆಗೂ ಆ ಚರ್ಚೆ ನಿಯಂತ್ರಣಕ್ಕೆ ಬಾರದೆ ನಂತರ ಸಭೆಯನ್ನು ಮುಂದೂಡಲಾಯಿತು. ಅದೇ ಪರಿಸ್ಥಿತಿ ಇವತ್ತೂ ಮುಂದುವರಿಯಬಾರದು. ಆ ದೃಷ್ಟಿಯಿಂದ ತಾವು ವಾತಾವರಣವನ್ನು ತಿಳಿ ಮಾಡುವುದಕ್ಕೋಸ್ಕರ ವಿರೋಧ ಪಕ್ಷದ ಕೆಲವು ಮುಖಂಡರುಗಳನ್ನು, ಸಭಾನಾಯಕರನ್ನು, ಉಪ ಮುಖ್ಯ ಮಂತ್ರಿಯವರನ್ನು, ಅರ್ಥ ಸಚಿವರನ್ನು, ಗ್ರಾಮೀಣಾಭಿವೃದ್ಧಿ ಸಚಿವರನ್ನು, ಸಂಸದೀಯ ಸಚಿವರನ್ನು ತಮ್ಮ ಕೊಠಡಿಗೆ ಕರೆಸಿ, ಸದನಕ್ಕಿಂಥ ಯಾರೂ ದೊಡ್ಡವರಲ್ಲ ಎನ್ನುವ ಅಂತಿಮ ತೀರ್ಮಾನವನ್ನು ಮಾಡಿ, ಈ ಸಭೆಯ ಘನತೆಯನ್ನು ಎತ್ತಿ ಹಿಡಿಯುವುದರಲ್ಲಿ ತಾವು ಮೊದಲಿಗರಾಗಿದ್ದೀರಿ. ವಿರೋಧ ಪಕ್ಷದ ನಾಯಕರು ಮಾತನಾಡತಕ್ಕಂಥ ಧಾಟಿಯ ಭರದಲ್ಲಿ ಅನೇಕ ವಿಚಾರಗಳನ್ನು ಮಾತನಾಡಿದ್ದಾರೆ. ಸಭಾ ನಾಯಕರಾದ ಮಾನ್ಯ ದೇವೇಗೌಡರೂ ಸಹ ವಿರೋಧ ಪಕ್ಷದ ನಾಯಕರಾಗಿ ಯಾರ ಮನಸ್ಸಿಗೂ ನೋವಾಗದ ರೀತಿಯಲ್ಲಿ ಹೆಚ್ಚಿನ ಕೆಲಸ ಮಾಡಿದ್ದಾರೆ. ಆಗ ನಾನೂ ಅವರ ಜೊತೆಯಲ್ಲೇ ಇದ್ದೆ. ನಿನ್ನೆ ದಿವಸ ವಿರೋಧ ಪಕ್ಷದ ನಾಯಕರು ಮಾತನಾಡಿದಂಥ ಮಾತಿನಿಂದ ಸಭಾನಾಯಕರ ಮನಸ್ಸಿಗೂ ನೋವಾಗಿದೆಯೆಂದು ನಮಗೂ ಅನಿಸಿದೆ, ಅವರಿಗೂ ಅನಿಸಿದೆ ಮತ್ತು ಸಭೆಗೂ ಅನಿಸಿದೆ. ಆ ದೃಷ್ಟಿಯಲ್ಲಿ, ವಿರೋಧ ಪಕ್ಷದ ನಾಯಕರ ಮನಸ್ಸಿನಲ್ಲೂ ನಿನ್ನೆ ದಿವಸ ಮಾತನಾಡಿರುವುದರಲ್ಲಿ ಎಲ್ಲೋ ತಪ್ಪಿದೆ ಎನ್ನುವ ಭಾವನೆ ಬಂದಿದೆಯೆಂದು ನಾನು ತಿಳಿಯುತ್ತೇನೆ. ಇದರ ಜೊತೆಗೆ ಮಾನ್ಯ ಅಧ್ಯಕ್ಷರು ಗಮನಿಸಿದ್ದಾರೋ ಇಲ್ಲವೋ ಗೊತ್ತಿಲ್ಲ, ನಿನ್ನೆ ದಿವಸ ಚರ್ಚೆ ನಡೆಯುವಂಥ ಸಂದರ್ಭದಲ್ಲಿ ಗೊಂದಲವೇರ್ಪಟ್ಟಾಗ, ಹಿಂದಿನ ಪೀಠದಲ್ಲಿ ಕುಳಿತಿರತಕ್ಕಂಥ ಸದಸ್ಯರುಗಳು ಬಹಳ ಅವಾಚ್ಯ ಶಬ್ದಗಳನ್ನು ಉಪಯೋಗಿಸಿದರು. ಬೇಕಾದರೆ ತಾವು ರೆಕಾರ್ಡ್‌ನ್ನು ತರಿಸಿ ನೋಡಬಹುದು. ಸಂಸದೀಯ ಭಾಷೆ ಮತ್ತು ನಡವಳಿಕೆಯನ್ನು ಮೀರಿದ ಕೆಟ್ಟ ಪದವನ್ನು ಉಪಯೋಗಿಸಿರುವುದು ನಮ್ಮ ಕಿವಿಗೆ ಕೇಳುತ್ತಿತ್ತು.

ಶ್ರೀ ಎ.ಟಿ. ರಾಮಸ್ವಾಮಿ : ಪಾಯಿಂಟ್ ಆಫ್ ಆರ್ಡರ್, ಹಿಂದಿನ ಸೀಟಿನ ಎಲ್ಲರೂ ಎಂದು ಹೇಳುವುದು ಸರಿಯಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಯಾರು ಯಾರು ಆ ಶಬ್ದಗಳನ್ನು ಉಪಯೋಗಿಸಿದರೆಂದು ಹೇಳತಕ್ಕಂಥ ಪರಿಸ್ಥಿತಿ ಆಗ ಇರಲಿಲ್ಲ, ಕೆಲವು ಕಡೆಯಿಂದ ಬರುತ್ತಿದ್ದ ಪದಗಳನ್ನು ಯಾರು ಹೇಳುತ್ತಿದ್ದಾರೆಂದು ಆ ಗೊಂದಲ ಮತ್ತು ಗದ್ದಲದಲ್ಲಿ ಗೊತ್ತಾಗುತ್ತಿರಲಿಲ್ಲ, ಆದರೆ, ಆ ರೀತಿ ಮಾತನಾಡುವುದರಿಂದ ಸದನದ ಗೌರವಕ್ಕೆ ಚ್ಯುತಿ ಬರುತ್ತದೆ. ಈ ಸದನದ ಕೀರ್ತಿಗೆ ಚ್ಯುತಿ ಬರುತ್ತದೆ. ಅದು ಆಗಬಾರದು.

(ಗೊಂದಲ)

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ನಿಮ್ಮ ಮನಸ್ಸಿಗೆ ಬಂತೆ ಮಾಡಬೇಕು ಎನ್ನುತ್ತೀರೋ?

ಶ್ರೀ ವಾಟಾಳ್ ನಾಗರಾಜ್ : ನಾನು ನೇರವಾಗಿ ಯಾರನ್ನೂ ಕುರಿತು ಮಾತನಾಡುತ್ತಿಲ್ಲ, ಆ ರೀತಿ ಅಸಂಸದೀಯ ಮಾತುಗಳನ್ನು ಆಡುವುದು ಸಂಸದೀಯ ನಡವಳಿಕೆಗೆ ಒಳ್ಳೆಯದಲ್ಲ, ಹಿಂದೆ ಇದ್ದ ಶ್ರೀಮಾನ್ ಗೋಪಾಲರ ಗೌಡರನ್ನು ಈಗಲೂ ನೆನಸಿಕೊಳ್ಳಬೇಕಾಗುತ್ತದೆ. ಆ ದೃಷ್ಟಿಯಿಂದ ನಿನ್ನೆ ಆದಂಥ ಘಟನೆಗೆ ತೆರೆ ಬೀಳಬೇಕು. ನಿನ್ನೆಯ ದಿವಸ ನಡೆದಂಥ ಚರ್ಚೆಯಲ್ಲೂ ವಿರೋಧ ಪಕ್ಷಗಳವರೇ ಒಬ್ಬರಿಗೊಬ್ಬರು ಟೀಕೆ ಮಾಡುತ್ತಿದ್ದುದು ಸರಿಯಾದ ಮಾರ್ಗ ಆಗಲಿಲ್ಲವೆಂದು ನಾನು ನೋವಿನಿಂದ ಹೇಳುತ್ತೇನೆ. ಆದುದರಿಂದ, ನಿನ್ನೆ ದಿವಸ ವಿರೋಧ ಪಕ್ಷದ ನಾಯಕರು ಮಾತನಾಡಿದಂಥ ಧಾಟಿ ಬಗ್ಗೆ ವಿಷಾದ ವ್ಯಕ್ತಪಡಿಸುವುದು ಒಳ್ಳೆಯದೆಂದು ನಾನು ಅವರಲ್ಲಿ ಅತ್ಯಂತ ಕಳಕಳಿಯಿಂದ ನನ್ನ ಅಭಿಪ್ರಾಯವನ್ನು ವ್ಯಕ್ತ ಮಾಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಈ ಸದನದಲ್ಲಿ ನಾವು ಯಾರೂ ದೊಡ್ಡವರಲ್ಲ, ಇಲ್ಲಿನ ನಿಯಮಾವಳಿಗಳ ಅಡಿಯಲ್ಲಿ ನಾವೆಲ್ಲರೂ ಕೆಲಸ ಮಾಡಬೇಕಾಗುತ್ತದೆ. ಆ ನಿಯಮಾವಳಿಗಳನ್ನು ಮತ್ತು ಸತ್ವ ಸಂಪ್ರದಾಯಗಳನ್ನು ನಾವೆಲ್ಲರೂ ಎತ್ತಿ ಹಿಡಿಯಬೇಕಾಗುತ್ತದೆ. ತಾವುಗಳು ಆ ಸ್ಥಾನದಲ್ಲಿ ಆಸೀನರಾಗಿದ್ದೀರಿ. ಆ ಸ್ಥಾನದಲ್ಲಿ ಆಸೀನರಾಗಿದ್ದೀರಿ. ಆ ಸ್ಥಾನದ ಬಗ್ಗೆ ಮತ್ತು ತಮ್ಮ ಬಗ್ಗೆ ನನಗೆ ತುಂಬಾ ಗೌರವವಿದೆ. ತಾವುಗಳು ಆ ಸ್ಥಾನದ ಗೌರವವನ್ನು ಎತ್ತಿ ಹಿಡಿಯುವುದರಲ್ಲಿ ತುಂಬಾ ಯಶಸ್ವಿಯಾಗಿದ್ದೀರಿ. ನಾನು ಈ ಸ್ಥಾನದಲ್ಲಿ ಕುಳಿತುಕೊಂಡು ತಮ್ಮ ಸ್ಥಾನಕ್ಕೆ, ತಮಗೆ ಸಹಕಾರ ನೀಡುವುದು ನನ್ನ ಆದ್ಯ ಕರ್ತವ್ಯವಾಗಿದೆ. ನಿನ್ನೆ ಪತ್ರಿಕಾ ವರದಿ ಮತ್ತು ಇತರ ವರದಿ ಮತ್ತು ದಾಖಲೆಗಳ ಆಧಾರದ ಮೇಲೆ ನಾನು ಮಾತನಾಡಿದ್ದುದು ಮಾನ್ಯ ಸಭಾನಾಯಕರಿಗಾಗಲೀ, ಇತರ ಯಾರಿಗೇ ಆಗಲಿ ನೋವು ಆಗಿದ್ದರೆ, ಅದು ನನ್ನ ಉದ್ದೇಶವಾಗಿರಲಿಲ್ಲ, ಅದಕ್ಕಾಗಿ ನನ್ನ ಮನಸ್ಸಿಗೂ ನೋವು ಆಗಿದೆ. ವಿಷಾದವೂ ಆಗಿದೆ. ತಾವುಗಳು ನಿನ್ನೆ ಕೇಳಿದಂತೆ ನನ್ನಲ್ಲಿರುವ ಪತ್ರಿಕಾ ವರದಿ ಮತ್ತಿತರೇ ದಾಖಲೆಗಳನ್ನು ಕಳುಹಿಸಿ ಕೊಡುತ್ತಾ ಇದ್ದೇನೆ.

(ಮಾನ್ಯ ವಿರೋಧ ಪಕ್ಷದ ನಾಯಕರು ಸಂಬಂಧಪಟ್ಟ ದಾಖಲೆಗಳನ್ನು ಮಾನ್ಯ ಸಭಾಧ್ಯಕ್ಷರಿಗೆ ಸಲ್ಲಿಸಿದರು)

ದಯವಿಟ್ಟು ಪರಾಮರ್ಶಿಸಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಸದನದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ವಿಷಾದವನ್ನು ವ್ಯಕ್ತಪಡಿಸುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ....

ಶ್ರೀ ಹೆಚ್.ಡಿ. ದೇವೇಗೌಡ : ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧಿ ಪಕ್ಷದ ನಾಯಕರು ಪತ್ರಿಕಾ ವರದಿ ಇತ್ಯಾದಿಗಳನ್ನು ಕೊಟ್ಟ ಮೇಲೆ ವಿಷಾದ ವ್ಯಕ್ತಪಡಿಸಬೇಕಾದ ಅಗತ್ಯವಿಲ್ಲ. You have to go through the documents. Please excuse me. When

once he has submitted his documents to substantiate the allegation made, the question of his regrets will not arise. Please pardon me if I have said anything contrary to the procedure of this House. When once he has produced the documents there ends the matter. It is for you to go through the documents the relevancy of the documents has to be seen and ruling has to be given. With folded hands I request you to not create bad prededent. There is no question of regrets.

SRI N. RAJANNA : This is the Gandhian way. This is how our leader has addressed.

+ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಈ ಸದನದ ಎಲ್ಲಾ ಸದಸ್ಯರ ಹಕ್ಕುಗಳನ್ನು ಕಾಪಾಡತಕ್ಕಂಥ ಮತ್ತು ರಕ್ಷಣೆ ಮಾಡತಕ್ಕಂಥ ಒಂದು ಅಧಿಕಾರ ಸ್ಥಾನದಲ್ಲಿ ತಾವು ಇದ್ದೀರಿ. ನಿನ್ನೆ ನಡೆದಂಥ ಘಟನೆಗಳ ಬಗ್ಗೆ ಮಾನ್ಯ ವಾಟಾಳ್ ನಾಗರಾಜ್‌ರವರು ವಿಷಯ ಪ್ರಸ್ತಾಪವನ್ನು ಮಾಡಿದರು. ನಡೆದಂಥ ಘಟನೆಯ ಬಗ್ಗೆ ಬಹುಶಃ ನಿಮ್ಮ ಕೊಠಡಿಯಲ್ಲಿ ಸಭೆಯನ್ನು ಕರೆಯಿಸಿ ಮುಖ್ಯಮಂತ್ರಿಗಳಿಗೆ ಮತ್ತು ವಿರೋಧ ಪಕ್ಷದ ನಾಯಕರಿಗೆ ರಾಜಿ ಮಾಡಿಸುವ ಪ್ರಯತ್ನ ನಡೆಯಿತೋ ಏನೋ ನನಗೆ ಗೊತ್ತಿಲ್ಲ. ಏಕೆಂದರೆ ನಾವು ಇಲ್ಲಿ ಹತ್ತು ಗಂಟೆಗೆ ಸರಿಯಾಗಿ, ಸರಿಯಾದ ಸಮಯಕ್ಕೆ ಬಂದಿದ್ದೇವೆ. ಇಲ್ಲಿ ಕಮ್ಯೂಲ್ ಇಸ್ಲಾಂರವರು, ಬಿಎಸ್‌ಪಿಯವರು, ಮುನಿಯಪ್ಪನವರು, ಎಲ್ಲರೂ ಕೂಡ ಇಲ್ಲಿಯೇ ಕುಳಿತಿದ್ದೇವೆ. ಇವ್ವೊತ್ತು ಕೆಲವೇ ಜನರನ್ನು ಕರೆಯಿಸಿ ಒಂದು ಕಾಂಪ್ರಮೈಸ್ ಮಾಡತಕ್ಕಂಥ ಪ್ರಯತ್ನ ಆಯಿತೋ ಅಥವಾ ಯಾವುದಾದರೂ ಒಂದು ರಾಜಿ ಸೂತ್ರವನ್ನು ಮಾಡತಕ್ಕಂಥ ಒಂದು ದೃಷ್ಟಿಯಿಂದ ತಾವು ಅವರನ್ನು ಕರೆಯಿಸಿ ಮಾತನಾಡಿದ್ದೀರೋ ಎಂಬ ಬಗ್ಗೆ ನಮಗೆ ಗೊತ್ತಾಗಲಿಲ್ಲ. ಏಕೆಂದರೆ ಅನೇಕ ಘಟನೆಗಳು ಏನು ನಿನ್ನೆ ಸದನದಲ್ಲಿ ನಡೆದವು, ಅದರ ಬಗ್ಗೆ ತಿಳಿದುಕೊಳ್ಳಲು ನಾವೆಲ್ಲರೂ ಉತ್ಸುಕರಾಗಿದ್ದೇವೆ. ಯಾವ ದೃಷ್ಟಿಯಿಂದ ಈ ಸಮಸ್ಯೆಯು ಬಗೆಹರಿಯುತ್ತದೆ, ಅದು ಬಗೆ ಹರಿಯಲು ತಾವು ಯಾವ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ? ಅದರ ಬಗ್ಗೆ ನಾವು ಕೂಡ ತಿಳಿದುಕೊಳ್ಳಬೇಕೆಂದು ಆಸಕ್ತಿ ಇದೆ. ಆದರೆ ಅದು ನಮಗೆ ಗೊತ್ತಾಗಲಿಲ್ಲ. ಈಗ ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದ ಮೇಲೆ, ತಾವು ಎಲ್ಲರನ್ನು ಕರೆಸಿದ್ದೀರಿ, ಮಾತನಾಡಿದ್ದೀರಿ, ಕೊನೆಗೆ ಅವರು ಕೂಡ ಒಪ್ಪಿಕೊಂಡರು, ಅಂದರೆ ಈ ರಾಜಿ ಸೂತ್ರಗಳು ಬಹುಶಃ ಅವರ ಮುಖಾಂತರ ನಮಗೆ ಗೊತ್ತಾಯಿತು. ಅದಕ್ಕೆ ನನ್ನ ಮನವಿ ಏನೆಂದರೆ, ಸದನದಲ್ಲಿ ಇದೆಲ್ಲವೂ ಕೂಡ ನಡೆದಾಗ, ಈ ಸದನದಲ್ಲಿರತಕ್ಕಂಥ ಎಲ್ಲಾ ವಿರೋಧ ಪಕ್ಷದವರನ್ನು ಕರೆಯಿಸಿ, ಇದರ ಬಗ್ಗೆ ಇತ್ಯರ್ಥ ಮಾಡಿದ್ದರೆ, ಅದು ಒಂದು ತರಹ ಇರುತ್ತಿತ್ತು. ಪರಸ್ಪರ ಯಾರು ಜಗಳ ಮಾಡಿದರು ಅವರಿಬ್ಬರನ್ನು ಕರೆಸಿ ಇತ್ಯರ್ಥ ಮಾಡಿದ್ದರೆ, ನಮ್ಮ ಅಭ್ಯಂತರವೇನೂ ಇರುತ್ತಿರಲಿಲ್ಲ. ಏಕೆಂದರೆ ಈ ಸದನವು ನಡೆಯಬೇಕು, ಇಲ್ಲಿ ಅನೇಕ ಮಹತ್ವವಾದಂಥ ವಿಷಯಗಳ ಬಗ್ಗೆ ಚರ್ಚೆಯಾಗಬೇಕು, ಅದಕ್ಕೆ ನಮ್ಮ ಸಂಪೂರ್ಣವಾದ ಸಹಕಾರವಿದೆ.

ನಿನ್ನೆ ತಾವು ಸದನವನ್ನು ಅಡ್‌ಜರ್ನ್ ಮಾಡಿದ್ದುದು ಏಕೆಂದರೆ ಮಾನ್ಯ ಮುಖ್ಯಮಂತ್ರಿಯವರು ಈ ಸದನದ ಸದಸ್ಯರಾದ ಶ್ರೀಮಾನ್ ರೇವಣ್ಣನವರ ಮೇಲೆ ಮಾಡಿದಂಥ ಅಪಾದನೆಗಳ ಬಗ್ಗೆ ಅದು ಏನು ನೋಟೀಸ್ ಅಥವಾ ಸಸ್ಪೆನ್‌ಶನ್ ಆರ್ಡರ್ ಏನು ಇಶ್ಯೂ ಆಗಿತ್ತು, ಅದನ್ನು ಸದನದಲ್ಲಿ ಇಡಬೇಕು, ಎನ್ನತಕ್ಕಂಥ

ಪ್ರಶ್ನೆ, ಅದು ಇಲ್ಲ ಅಂತ ಅವರು, ಪುನಃ ಅವರು ಅದಕ್ಕೆ ವಿರೋಧವನ್ನು ವ್ಯಕ್ತ ಪಡಿಸಿದ್ದು, ಇವೆಲ್ಲಾ ಅನೇಕ ಸಮಸ್ಯೆಗಳು ಬಂದಮೇಲೆ, ಈ ಸದನದಲ್ಲಿ ಇಡಲೇ ಬೇಕು, ಪ್ರೂವ್ ಮಾಡಲೇಬೇಕೆಂದು ಹಠ ಹಿಡಿದ ಮೇಲೆ, ತಾವು ಸದನವನ್ನು ಅಡ್‌ಜರ್ನ್ ಮಾಡಿದ್ದೀರಿ. ನಾವು ತಿಳಿದುಕೊಂಡ ಹಾಗೆ ಕ್ವಶ್ಚನ್ ಅವರ್ 10 ರಿಂದ 11 ಗಂಟೆಯಾಗುತ್ತದೆ, ಅದಾದ ಮೇಲೆ ಈ ವಿಚಾರ ಬರುತ್ತದೆ ಎಂದು ಇತ್ತು. ಯಥಾ ಪ್ರಕಾರ ಈ ಸದನದಲ್ಲಿ ಈವರೆಗೆ ನಡೆದುಕೊಂಡು ಬಂದಿರುವುದು ಅಜೆಂಡಾ ಪ್ರಕಾರ ಏನು ಕ್ವಶ್ಚನ್ಸ್ ಅವರ್ ಇದೆ ಅನು ಆದಮೇಲೆ ಇದನ್ನು ಪ್ರಸ್ತಾಪ ಮಾಡುತ್ತಾರೆ, ಇದರ ಬಗ್ಗೆ ಆಸಕ್ತಿ ಇರತಕ್ಕಂಥ ಎಲ್ಲರನ್ನು ಕರೆಯಿಸುತ್ತಾರೆ ಎಂದು ತಿಳಿದಿದ್ದೆವು. ಅದು ನಮ್ಮಿಂದ ಬಗೆಹರಿಯುವುದಿಲ್ಲ, ಮತ್ತು ನಮ್ಮ ಅವಶ್ಯಕತೆಯು ಇಲ್ಲ ಎಂದಾಗ ನಾವು ಕೂಡ ಇಲ್ಲಿ ಕುಳಿತುಕೊಂಡು ಬಗೆಹರಿಯಲಿ ಎಂದು ಸುಮ್ಮನಾದೆವು. ಆದರೆ ನಮಗಾದರೂ ಗೊತ್ತಾಗಬೇಕಲ್ಲ? ಯಾವ ರಾಜಿ ಸೂತ್ರ? ಅವರು ಏನು ಹೇಳಿದರು? ಕೊನೆಗೆ ಏನು ಕನ್‌ಕ್ಲೂಜನ್‌ಗೆ ಬಂದಿದ್ದೀರಿ? ಕೊನೆಗೆ ಏನು ಡಾಕ್ಯುಮೆಂಟ್ ಕೊಟ್ಟರು? ಅವರು ಆ ಡಾಕ್ಯುಮೆಂಟ್ ನೋಡಿಕೊಂಡು ಸೆಟಿಸ್‌ಫೈ ಆಗಿ ನೀನು ಹೊಡೆದ ಹಾಗೆ ಮಾಡು, ನಾನು ಅತ್ತ ಹಾಗೆ ಮಾಡುತ್ತೇನೆ ಎಂದು ರಾಜಿ ಆದರೋ? ಏನಾದರೂ ಆಗಲಿ ಅದು ನಮಗೆ ಗೊತ್ತಾಗಬೇಕಲ್ಲ? ಇಲ್ಲದಿದ್ದರೆ ಇಡೀ ಸದನದಲ್ಲಿ ನಾವು ಒಂದೇ ವಿಷಯವನ್ನು ನಾಲ್ಕೆಂಟು ತಾಸು ಚರ್ಚೆ ಮಾಡಿ ಮಾಡಿ ಒಂದೇ ಪಾಯಿಂಟ್ ಮೇಲೆ ಸುಮಾರು ಮೂರು ತಾಸು ಕುಳಿತಿದ್ದೇವೆ.

ನಮಗೆ ಏನೆಂದರೆ We are taken for granted ಎನ್ನುವ ರೀತಿ ಆಗಿದೆ. ನಾವು ಏನಾದರೂ ನಿರ್ಣಯವನ್ನು ತೆಗೆದುಕೊಳ್ಳುತ್ತೇವೆ, ನೀವು ಫಾಲೋ ಮಾಡಿ ಎಂದು ಹೇಳಿ, ಹೇಗೆ ಅವರು ನೋ ಕಾನ್ಫಿಡೆನ್ಸ್ ಮೋಶನ್‌ನ್ನು ತಂದು ಮೂರು ದಿವಸಗಳ ಮೊದಲು ನೋಟೀಸ್ ಕೊಟ್ಟಮೇಲೆ ನಮ್ಮ ಜೊತೆಯಲ್ಲಿ ಬನ್ನಿ ಎಂದ ಹಾಗೆ, ಇವೊತ್ತಿನ ನಿರ್ಣಯವು ಕೂಡ, ಈ ಸದನದ ಮುಖಂಡರು ಅದೇ ರೀತಿಯಲ್ಲಿ ಮಾಡಿದ್ದಾರೆ ಎಂದು ಬಹಳ ನೋವಿನಿಂದ ಹೇಳಬೇಕಾಗುತ್ತದೆ. ನನಗೆ 9-30ಕ್ಕೆ ಒಂದು ಫೋನ್ ಅವರಿಂದ ಬಂದಿತ್ತು. ಬಹುಶಃ ಇದೇ ಮೀಟಿಂಗ್‌ಗಾಗಿ ಕೇಳಿದ್ದರೋ ಏನೋ ಗೊತ್ತಿಲ್ಲ, ಹಾಗಾದರೆ 10-00 ಗಂಟೆಗೆ ಅಲ್ಲಿಯೇ ಸಿಗುತ್ತಾರೆಂದು ನಾನು ನೇರವಾಗಿ ಇಲ್ಲಿಗೇ ಬಂದೆ. ಮಾನ್ಯ ನಂಜೇಗೌಡರು ಈ ಕಡೆಗೆ ಹೋಗುತ್ತಾ ಇದ್ದರು. ನಾನು ಒಳಗಡೆ ಬಂದಿದ್ದೆ. ನಾನು ಅನೇಕ ನಮ್ಮ ಸ್ನೇಹಿತರ ಜೊತೆಗೆ ಮೊಗಸಾಲೆಯಲ್ಲಿ ಕುಳಿತಿದ್ದೆವು. ನಮಗೆ ಇಲ್ಲಿ ಏನು ನಡೆದಿದೆ ಎಂಬುದು ಗೊತ್ತಾಗಬೇಕು. ನಿಮಗೆ ನೇರವಾಗಿ ಅವರು ಡಾಕ್ಯುಮೆಂಟ್ಸ್ ಕೊಟ್ಟರೋ? ಅಥವಾ ಅವರು ನೋಡಿದರೋ, ಅವರು ಸೆಟಿಸ್‌ಫೈ ಆದರೋ? ಅಥವಾ ಅವರಿಬ್ಬರೂ ಸೆಟಿಸ್‌ಫೈ ಆದರೆ ಈ ಸದನಕ್ಕೆ ಆ ಬಗ್ಗೆ ಚರ್ಚೆ ಮಾಡುವ ಹಕ್ಕು ಇಲ್ಲ, ಈ ಸದನದ ಗಮನಕ್ಕೆ ಅದನ್ನು ತರತಕ್ಕಂಥ ಅವಶ್ಯಕತೆಯೂ ಇಲ್ಲ ಎಂಬ ವಿಚಾರವನ್ನು ತಾವು ಸ್ಪಷ್ಟಪಡಿಸಿದರೆ ನಮಗೂ ಕೂಡ ನಮ್ಮ ಹಕ್ಕು, ನಮ್ಮ ಇತಿಮಿತಿಗಳ ಬಗ್ಗೆ ಗೊತ್ತಾಗುತ್ತದೆ.

+ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೇ, ಈ ಮಹಾನ್ ಸದನದ ಕಾರ್ಯಕಲಾಪಗಳು ಸುಗಮವಾಗಿ ನಡೆಯಬೇಕು. ಅದು ಈ ಸದನದಲ್ಲಿರತಕ್ಕಂಥ ಎಲ್ಲರ ಆಸೆಯೂ ಕೂಡ ಹೌದು. ಸರಕಾರದ ಮನಸ್ಸಿನಲ್ಲಿದ್ದಿರಬಹುದು, ನಿನ್ನೆ ನಡೆದಿರತಕ್ಕಂಥ ಈ ಬೆಳವಣಿಗೆ ಸದನದಲ್ಲಿ ಇದನ್ನು ಉಪಯೋಗ ಮಾಡಿಕೊಂಡು ಹೋಗುತ್ತಿದ್ದಾರೆ ಎಂಬ ಭಾವನೆಯು ಜನರಿಗೆ ಅಥವಾ ಬೇರೆಯವರಿಗೆ ಬಂದರೆ ಆ ಒಂದು ಅಭಿಪ್ರಾಯ ಸರಿಯಾಗಲಾರದು, ನಾವು ಅದನ್ನು ಎದುರಿಸಬೇಕೆಂಬ

ಕಾರಣದಿಂದ ನೀವು ಈ ಸದನದ ಕಾರ್ಯಕಲಾಪಗಳು ನಡೆಯಲಿ ಎಂಬ ಒಂದು ಅಭಿಪ್ರಾಯಕ್ಕೆ ಬಂದಿರಬಹುದು. ಹಾಗೇನಾದರೂ ನಿಮ್ಮ ಮನಸ್ಸಿನಲ್ಲಿದ್ದರೆ ಅದು ನನಗೆ ಗೊತ್ತಿಲ್ಲ. ಇದು ನನ್ನ ಅಂದಾಜು, ಇಲ್ಲವಾದರೆ ನಾನು ಬಹಳ ಸಂತೋಷಪಡುತ್ತೇನೆ. ಕಾರ್ಯಕಲಾಪಗಳು ನಡೆಯಬೇಕೆಂದು ನಾವು ಎಷ್ಟೋ ಸಾರಿ ಕುಳಿತುಕೊಳ್ಳುತ್ತೇವೆ, ಎಷ್ಟೋ ಸಾರಿ ತಡವಾಗಿ ರಾತ್ರಿ ಹೊತ್ತಿನಲ್ಲಿ ಕೂಡ ಕುಳಿತುಕೊಂಡು ಕಲಾಪಗಳನ್ನು ನಡೆಸಿದ್ದೇವೆ. ಮಾನ್ಯ ದೇವೇಗೌಡರು ಪಾರ್ಲಿಮೆಂಟ್ ಸದಸ್ಯರಾಗಿದ್ದಂಥವರು. ಅಲ್ಲಿ ಒಮ್ಮೆಮ್ಮೆ ಬೆಳಗಿನ ಜಾವದವರೆಗೂ ಕುಳಿತುಕೊಳ್ಳುತ್ತಾರೆ. ಹೌಸ್ ಆಫ್ ಕಾಮನ್ಸ್‌ನಲ್ಲಿ ರಾತ್ರಿ ವೇಳೆಯಲ್ಲಿಯೂ ಕಲಾಪಗಳನ್ನು ನಡೆಸುತ್ತಾರೆ. ನಾವು ನಿನ್ನೆ ಬಿಎಸಿಯಲ್ಲಿ ಚರ್ಚೆ ಮಾಡಿ ಒಂದು ತೀರ್ಮಾನಕ್ಕೆ ಬಂದ ಹಾಗೆ, ರಜಾದಿನಗಳು ಬರುವುದರಿಂದ ಇದನ್ನು ನಾಳೆಯೇ ಮುಕ್ತಾಯ ಮಾಡಬೇಕೆಂಬ ಒಂದು ಅಭಿಪ್ರಾಯವನ್ನು ಇಟ್ಟುಕೊಂಡು ಅವಿಶ್ವಾಸ ನಿರ್ಣಯ ನಿನ್ನೆಯ ಪ್ರಾರಂಭವಾಗಲಿ ಎಂದು ಮಾಡಿದ್ದೇವೆ.

ಇಂದು ಪ್ರಾರಂಭ ಮಾಡಿದ್ದುದು ಅದೆಲ್ಲ ಒಳ್ಳೆಯದು. ಸರಿಯಾಗಿ ಅಲ್ಲಿಯವರೆಗೆ ನಡೆದಿದೆ. ಆದರೆ ಪ್ರಾರಂಭವಾದ ಮೇಲೆ ಬೆಳವಣಿಗೆಗಳು ಯಾರೂ ಕೂಡ ನಿರೀಕ್ಷೆ ಮಾಡಿರಲಿಲ್ಲ, ಆಗಿಬಿಟ್ಟಿದೆ. ಒಂದೇ ಒಂದು, ನಿನ್ನೆ ಬೆಳವಣಿಗೆಯಾಗಿರುವ ವಿಷಯ ಮಾನ್ಯ ಮುಖ್ಯಮಂತ್ರಿಗಳಿಗೆ ಅಥವಾ ಒಬ್ಬ ಸದಸ್ಯರಿಗೆ ಸಂಬಂಧಪಟ್ಟದ್ದಾಗಿ ಉಳಿಯಲಿಲ್ಲ ಅದು. ನಿನ್ನೆಯ ವಿಷಯ ಬೆಳವಣಿಗೆ ಯಾವ ರೀತಿ ಬಂತು ಎಂದರೆ, ಮುಖ್ಯಮಂತ್ರಿಗಳ ಸ್ಥಾನಮಾನದ ಘನತೆ ಗೌರವದ ಪ್ರಶ್ನೆ. ನಾವೆಲ್ಲರೂ ಇದನ್ನು ಪಕ್ಷಾತೀತವಾಗಿ ತೆಗೆದುಕೊಂಡಿದ್ದೇವೆ. ಆದರೆ ಬಿಜೆಪಿ ಸದಸ್ಯರು ಬೇರೆ ಇಟ್ಟುಕೊಂಡಿರಬಹುದು, ಅದು ಅವರಿಗೆ ಬಿಟ್ಟಿರುವ ವಿಚಾರ. ಏಕೆಂದರೆ ಪ್ರಜಾಪ್ರಭುತ್ವದಲ್ಲಿ ಆ ಸ್ಥಾನಮಾನದ ಘನತೆ ಗೌರವವನ್ನು ಯಾರಾದರೂ ದುರುಪಯೋಗಪಡಿಸಿದ್ದರೆ, ಅದರ ಬಗ್ಗೆ ಕಳಕಳಿ ಸಂಬಂಧಪಟ್ಟ ಎಲ್ಲರಿಗೂ ಇರಬೇಕಾಗುತ್ತದೆ. ಈ ದೃಷ್ಟಿಯಿಂದ ಸದನದ ಸ್ವತ್ತಾಗಿ ಆ ವಿಚಾರವನ್ನು ನಾವು ಪ್ರಸ್ತಾಪ ಮಾಡಿದ್ದೇವೆ. ಪದೇ ಪದೇ ಈ ಮಾತನ್ನು ಆಡಿದ್ದೇವೆ. ನಾನು ವಿವರಗಳಿಗೆ ಹೋಗುವುದಿಲ್ಲ. ರೇವಣ್ಣನವರು ಹೇಳಿದ್ದಾರೆ, ದೇವೇಗೌಡರು ಹೇಳಿದ್ದಾರೆ. ಏಕೆಂದರೆ ಸಂಬಂಧಪಟ್ಟವರೇ ಅವರು. ಪ್ರಸ್ತಾಪ ಮಾಡಿರುವುದು ಮಾನ್ಯ ವಿರೋಧಪಕ್ಷದ ನಾಯಕರು.

ಮಾನ್ಯ ಖರ್ಗೆಯವರು ಹೇಳಿರುವುದು ಬಹಳ ಒಳ್ಳೆಯ ಪಾಯಿಂಟ್. ತಾವು ಹೇಳಿಕಳುಹಿಸಿದಿರೋ ಬಿಟ್ಟರೋ ನನಗಂತೂ ಗೊತ್ತಿಲ್ಲ. ನಮ್ಮನೆಗಂತೂ ಫೋನ್ ಕಾಲ್ ತಮ್ಮ ಮನೆಯಿಂದ ಬಂದಿಲ್ಲ. ಏಕೆಂದರೆ ಮಾನ್ಯ ಸಭಾಧ್ಯಕ್ಷರು ಕರೆಯುತ್ತಿದ್ದಾರೆ ಎಂದರೆ ನಾನು ತಕ್ಷಣ ಆದರೂ ಬರುತ್ತೇನೆ, ಅಥವಾ ನಾನು ಇಲ್ಲದೇ ಇದ್ದರೆ ಇಂಥವರಿಗೆ ಹೋಗಿಬನ್ನಿ ಎಂದು ಹೇಳುತ್ತೇನೆ. ಆದರೆ ನನಗೆ ಗೊತ್ತಾದಂತೆ ನಮ್ಮ ಪಕ್ಷದ ವತಿಯಿಂದ ಸಭಾಪತಿಯವರು ಇಲ್ಲಿದ್ದರು ಅವರು ಹೋಗಿದ್ದರು ಎಂದು ಕಾಣುತ್ತದೆ, ಸಂತೋಷ. ನಾನು ಈ ವಿಚಾರದಲ್ಲಿ ತಮಗೆ ಅಭಿನಂದನೆ ಸಲ್ಲಿಸುತ್ತೇನೆ. ಆದರೆ ಬೇರೆ ಪಕ್ಷದವರಿಗೆ ಆ ವಿಚಾರ ಹೋಗಿದೆಯೋ ಇಲ್ಲವೋ ಎಂದು ಈಗ ಖರ್ಗೆಯವರು ಹೇಳಿದ ಮೇಲೆ ನನಗೆ ಗೊತ್ತಾಯಿತು. ಅನೇಕ ಸದಸ್ಯರು ಗೊತ್ತಿಲ್ಲ ಎಂದ ಮೇಲೆ ಅದರರ್ಥ ವಿಷಯದ ಇತ್ಯರ್ಥ ತಮ್ಮ ಅಧ್ಯಕ್ಷತೆಯಲ್ಲಿ ನಡೆಯಬೇಕೆಂಬ ಮೂಲಭೂತ ಅನಿಸಿಕೆ ನಮಗೆಲ್ಲರಿಗೂ ಇದ್ದರೂ ಕೂಡ ಅದರ ಇತ್ಯರ್ಥ ಸಂಬಂಧಪಟ್ಟ ಸದನದ ಎಲ್ಲಾ ಭಾಗಗಳಿಗೆ ಸಂಪರ್ಕ ಇಟ್ಟೇ ಅದು ಆಗಬೇಕಾಗುತ್ತದೆ. ಇಲ್ಲಿ ಅದರ ಕೊರತೆ ನನಗೇಕೋ ಕಾಣುತ್ತಿದೆ. ಇಲ್ಲ ಇಲ್ಲ, ಸರ್ಕಾರದ ಪರವಾಗಿ ಮಾನ್ಯ ಮುಖ್ಯಮಂತ್ರಿಗಳಾದ ದೇವೇಗೌಡರು, ಇಲ್ಲ ಅದೇನೋ ಆಗೋದು ಆಗಿಬಿಟ್ಟಿದೆ, ಹೋಗೋದು ಹೋಗಿದೆ, ಬೇಕಾದರೆ ಕ್ಲೋಸೇ ಮಾಡಿಬಿಡೋಣ, ಅಧ್ಯಕ್ಷರ ತೀರ್ಮಾನವೇ ಅಂತಿಮ, ವಿರೋಧಪಕ್ಷದವರ ಕೈಲಿ ಏನು ಹೇಳಿಕೆ ಕೊಡಬೇಕೋ ಅದನ್ನು ಕೊಡಿಸುವುದು.

ಇದು ಅವರಿಗೆ ಬಿಟ್ಟಿರುವ ವಿಚಾರ. ಆದರೆ ಈಗ ಮಾನ್ಯ ಮುಖ್ಯಮಂತ್ರಿಗಳು ಎದ್ದು ಹೇಳಿಬಿಟ್ಟರು, ಈಗ ಅವರು ನನ್ನ ಮನಸಿಗೆ ನೋವಾಗಿದೆ, ನನ್ನ ಅಭಿಪ್ರಾಯ ಹಾಗಿರಲಿಲ್ಲ ಎಂದು ವಿರೋಧಪಕ್ಷದ ನಾಯಕರು ಹೇಳಿದ ಮೇಲೆ, ದಾಖಲೆಗಳಿವೆ ಮತ್ತು ಬೇರೆ ಏನೇನಿವೆ ಅವನ್ನೆಲ್ಲಾ ತಮ್ಮ ಹತ್ತಿರ ಕಳಿಸಿಕೊಡುತ್ತೇನೆಂದು ತಮ್ಮ ಬಳಿ ಕಳಿಸಿಕೊಟ್ಟರು. ಅಲ್ಲಿಗೆ ವಿಷಯ Again that matter is still alive ಎನ್ನುವುದು ಸ್ಪಷ್ಟವಾಗುತ್ತದೆ. ಅದಕ್ಕಾಗಿಯೇ ದೇವೇಗೌಡರು ವಿಷಾಯ ವ್ಯಕ್ತಪಡಿಸುವ ಸಮಸ್ಯೆ ಇಲ್ಲಿ ಉದ್ಭವವಾಗುವುದಿಲ್ಲ ಎಂದು ಹೇಳಿದರು. ಕ್ಷಮಿಸಬೇಕು, ನಾನು ನಿಮಗೆ ಬೆಂಬಲ ಕೊಡಬೇಕೆಂಬ ಪ್ರಶ್ನೆ ಅಲ್ಲ. This is a matter which is the property of the House.ಈ ಸದನದಲ್ಲಿ ತೀರ್ಮಾನ ಆಗಬೇಕಾಗಿರುವ ವಿಚಾರ. ವಿಷಾದ ವ್ಯಕ್ತಪಡಿಸುವುದು ಬಿಡುವುದು ಸಂಸದೀಯ ವ್ಯವಹಾರದಲ್ಲಿ ಇರುತ್ತದೆ There I agree ಮತ್ತೊಂದು ಆದಾಗಬೇಕೋ ಬಿಡಬೇಕೋ, ನಿಜ ಹೇಳಬೇಕೆಂದರೆ at one point of time I did not agree with the suggestion made by the Hon. Minister for Parliamentary Affairs Mr. Nanaiah. ಕ್ಷಮೆ ಕೇಳಬೇಕೆಂದಾಗ ಹಾಗೆ ಕ್ಷಮೆ ಕೇಳುವ ಸಂಬಂಧ ಬರುವುದಿಲ್ಲವೆಂದು ನಾವು ಆಡಿದ್ದೇವೆ. Still we have got another feeling in our minds. ತಮಗೆ ಗೊತ್ತಿದೆ, ಏಕೆಂದರೆ ಕಲಾಪ ಮುಂದುವರಿಯಬೇಕಾಗುತ್ತದೆ. ಅವಿಶ್ವಾಸ ಸೂಚನೆಗಳು ಪಾರ್ಲಿಮೆಂಟಿನಲ್ಲಿ ಒಂದೊಂದೇ ದಿವಸ ಕ್ಲೋಸಾಗಿದ್ದಿದೆ. ಎರಡು ದಿವಸದಲ್ಲಿ ಕ್ಲೋಸಾಗಿದ್ದೂ ಇದೆ. But still you were gracious enough - I must thank you Sir, for having allotted nearly 2 - $2\frac{1}{2}$ days for this motion to be taken up and then to see that the matter is closed on the subject. ತಾವು ಅದಕ್ಕೂ ಅವಕಾಶ ಮಾಡಿಕೊಟ್ಟಿರುವುದನ್ನು ಸದುಪಯೋಗ ಮಾಡಿಕೊಳ್ಳುವುದನ್ನು ಮಾನ್ಯ ವಿರೋಧ ಪಕ್ಷದ ನಾಯಕರು, ಸಂಬಂಧಪಟ್ಟವರು ಮಾಡಬೇಕು. ಇದಕ್ಕೆ ಸಹಕಾರ ನಮ್ಮ ನಿಯಮಾವಳಿ ಚೌಕಟ್ಟಿನಲ್ಲಿ ಯಾವ ರೀತಿಯಾಗಿ ತೆಗೆದುಕೊಂಡು ಹೋಗಬೇಕೆಂಬ ಬಗ್ಗೆ ನಾವು ನಮ್ಮ ಮುಂದಿನ ಹೆಜ್ಜೆ ಇಡಬೇಕು, ಅದೇ ಸಂಸದೀಯ ವ್ಯವಹಾರದಲ್ಲಿರುವ ಕೌಶಲ್ಯ ನಾನು ತಿಳಿದುಕೊಂಡ ಹಾಗೆ. ಇದೇ ನಾವು ಕೊಡತಕ್ಕಂತಹ ಗೌರವ ಎಂದು ನಾನು ತಿಳಿದುಕೊಂಡಿದ್ದೇನೆ. ಆಮೇಲೆ ಮಾನ್ಯ ವಿರೋಧಪಕ್ಷದ ನಾಯಕರು ಇನ್ನೊಂದು ಹೇಳಿದರು, ನಾನು ಸುಮ್ಮನೆ ಕುಳಿತುಕೊಂಡಿದ್ದೆ ಏನೋ ಚರ್ಚೆಯಾಗಿರಬೇಕು, ಏನೋ ಮಾತುಕತೆ ಮಾಡಿದ್ದಾರೆ let us respect that. ಎಂಬ ದೃಷ್ಟಿಯಿಂದ ನಾನು ಸುಮ್ಮನೆ ಕುಳಿತುಕೊಂಡಿದ್ದೆ.

ನಾನು ಸಡನ್ನಾಗಿ ಎದ್ದು ಹೇಳುವುದಕ್ಕೂ ಹೋಗಲಿಲ್ಲ. ಮಾನ್ಯ ಹಿರಿಯ ಸದಸ್ಯ ಶ್ರೀ ವಾಟಾಳ್‌ರವರು ಎದ್ದು ಇದಕ್ಕೇನಾದರೂ ಒಂದು ಮುಕ್ತಾಯ ಮಾಡಬೇಕೆಂದು, ತಾವೇನಾದರೂ ಮಾತುಕತೆ ಮಾಡಿರಬಹುದು ಎಂದು ನಾನು ಸುಮ್ಮನೆ ಕುಳಿತಿದ್ದೆ. ಅವರು ಏನು ಹೇಳಿದ್ದುದು: ನನ್ನ ಅಭಿಪ್ರಾಯ ಹೀಗಲ್ಲ, ನನ್ನ ಮನಸಿಗೆ ಕೂಡ ವಿಷಾದವಾಗಿದೆ ಎಂಬ ಅರ್ಥದಲ್ಲಿ ಹೇಳಿ ನಾನು ಇನ್ನೂ ಭಾಷಣ ಮುಂದುವರೆಸಬಹುದೇ ಎಂದುಬಿಟ್ಟರೆ ನಾವೆಲ್ಲ ಇಲ್ಲಿ ಏತಕ್ಕೆ ಕುಳಿತುಕೊಂಡಿದ್ದೇವೆ? ಅಲ್ಲಿ ತೀರ್ಮಾನವಾದದ್ದು ಎಲ್ಲರಿಗೂ ಇವೊತ್ತು ಗೊತ್ತಾಗುವುದಿಲ್ಲ. ನಾನು ಭಾಷಣ ಮುಂದುವರೆಸಬಹುದೇ ಎಂದುಬಿಟ್ಟರೆ what happened to the matter that has now become the property of this August House? ಅನ್ನುವ ವಿಚಾರ, ತಮ್ಮಿಂದ ಆ ವಿಚಾರ ಹೇಗೆ ಮುಕ್ತಾಯವಾಗಿದೆ ಎಂದು ಗೊತ್ತಾಗದೇ ಅಜೆಂಡಾದಲ್ಲೇನಿದೆ? ಮಾನ್ಯ ಖರ್ಗೆಯವರು ಹೇಳಿದಂತೆ ಪ್ರಶ್ನೋತ್ತರ ಇದೆ At least you will have to say that I have suspended the Question Hour or something like that. Unless there is a Ruling

from your side or somekind of Say from your end, how can we presume to what happened to Question Hour. I think the Hon. Leader of the Opposition is trying to take the entire House without obtaining the opinion of the House or taking you into confidence. This is highly unbecoming on the part of the Leader of the Opposition again.

ನಾನಾದರೂ ಈ ಸಂದರ್ಭದಲ್ಲಿ ಮುಂದೆ ಯಾವ ರೀತಿ ಹೋಗಬೇಕೆಂಬ ವಿಚಾರ the matter is still alive. ಕ್ವೆಶ್ಚನ್‌ಅವರ್ ಎಂದು ನಮಗೆ ಗೊತ್ತಿಲ್ಲ. He can't usurp the powers vested on this August House.

ಯಾರಿಗೂ ಕೂಡ ಸಾಧ್ಯವಾಗುವುದಿಲ್ಲ. ಆದ್ದರಿಂದ ಸಭಾಧ್ಯಕ್ಷರಲ್ಲಿ ನಾನು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ವಿಷಯ ಇತ್ಯರ್ಥ ನನ್ನ ಪ್ರಕಾರ ಆಗಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಕೂಡ ಅದನ್ನೇ ಹೇಳಿದರು ಎಂದು ನಾನು ತಿಳಿದುಕೊಂಡಿದ್ದೇನೆ. ಆದ್ದರಿಂದ ಡಾಕ್ಯುಮೆಂಟ್ಸ್ ಎಲ್ಲಾ ಕೊಟ್ಟಾದ ಮೇಲೂ ನಿನ್ನೆ ಅವರು ಏನು ಹೇಳಿದ್ದರು ಅದೇ ವಿಷಯ ಈಗಲೂ ಮುಂದುವರೆದಿದೆ ಎಂದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಹಾಗಾದರೆ ಇಡೀ ಸದನದಲ್ಲಿ ಏನು ಅಭಿಪ್ರಾಯ ವ್ಯಕ್ತವಾಯಿತೋ ಅದನ್ನು what should happen to that. We would like to know where we stand as far as subject is concerned.

ಆದ್ದರಿಂದ ಅಧ್ಯಕ್ಷರೇ, ಇದು ಘನತೆ ಗೌರವದ ಪ್ರಶ್ನೆ, ಮಾನ್ಯ ಮುಖ್ಯಮಂತ್ರಿ ಇರಬಹುದು ಮಾನ್ಯ ಸದಸ್ಯ ರೇವಣ್ಣನವರಿರಬಹುದು ಅಥವಾ ಈ ಸದನದ್ದಿರಬಹುದು Nobody can take for granted the rights, privileges of all the hon. members of this August House. ಯಾರೂ ಕೂಡ ಅದನ್ನು ರ್‍ಯಾನ್‌ಸ್ಯಾಕ್ ಮಾಡಲು ಆಗುವುದಿಲ್ಲ. Every member is equal to others. ಈ ಭಾವನೆಯಿಂದ ನಾವು ಕಂಡುಕೊಂಡು ಬಂದಿದ್ದೇವೆ, ಗೌರವ ಕೊಟ್ಟುಕೊಂಡು ಬಂದಿದ್ದೇವೆ. ಗೌರವವನ್ನು ಅಷ್ಟೇ ನಿರೀಕ್ಷೆ ಮಾಡುತ್ತಾ ಬಂದಿದ್ದೇವೆ. ಆದ್ದರಿಂದ ಈ ಸಂದರ್ಭದಲ್ಲಿ ನಾನು ಹೇಳುತ್ತೇನೆಂದರೆ ಒಂದು ಸಲಹೆ ಕೊಡುತ್ತಿದ್ದೇನೆ. ಏಕೆಂದರೆ ತಾವು ಒಳ್ಳೆಯ ಅಭಿಪ್ರಾಯದಿಂದ ಈ ವಿಷಯವನ್ನು ಇಲ್ಲಿಗೆ ಮುಕ್ತಾಯ ಮಾಡಿ ಅವಿಶ್ವಾಸ ಸೂಚನೆಯನ್ನು ಚರ್ಚೆಗೆ ತೆಗೆದುಕೊಂಡು ಹೋಗೋಣ ಎಂದು ಅಭಿಪ್ರಾಯಕ್ಕೆ ಬಂದಿದ್ದೀರಿ ಎಂದು ನನಗೆ ವ್ಯಕ್ತವಾಗುತ್ತಿದೆ. ನಾನು ತಮ್ಮನ್ನು ರಿಕ್ವೆಸ್ಟ್ ಮಾಡಿಕೊಳ್ಳುತ್ತಿದ್ದೇನೆ; ಮತ್ತೆ ಅವರು ಡಾಕ್ಯುಮೆಂಟ್ ಇವತ್ತು ಕೊಟ್ಟಿರುವುದರಿಂದ, ನಿನ್ನೆ ನೀವೆಷ್ಟು ಅವರಿಗೆ ಕೊಡಿ ಕೊಡಿ ಎಂದರೂ ಅವರು ನಿನ್ನೆ ಕೊಡಲಿಲ್ಲ, ಇವತ್ತು ಅಂತೂ ಆನೆ ಬಹಳ ಕಷ್ಟಪಟ್ಟು ಒಂದು ಸಣ್ಣ ಮರಿ ಹಾಕಿತ್ತು. ಯಾವುದೋ ಒಂದು ಡಾಕ್ಯುಮೆಂಟ್ ಪತ್ರಿಕಾ ವರದಿ ಎಂದು ತಮ್ಮ ಬಳಿ ಬಂದಿದೆ. ದಯವಿಟ್ಟು ಈ ಸದನವನ್ನು ಸ್ವಲ್ಪ ಕಾಲ, ಕ್ಷಮಿಸಬೇಕು, ನಾನು ಅನೆನೆಸಸರಿ ಸದನ ಮುಂದಕ್ಕೆ ಹಾಕಲು ಸಲಹೆ ಕೊಟ್ಟಿಲ್ಲ, ಆದರೆ ಅನಿವಾರ್ಯವಾಗಿ ಈ ವಿಷಯ ಇತ್ಯರ್ಥ ತಕ್ಷಣ ಮುಗಿಯಬೇಕು ಒನ್ಸ್‌ಫಾರಾಲ್, ಆ ಸಬ್ಜೆಕ್ಟ್ ಏನಾಯಿತು ಎಂಬ ವಿಷಯ ಗೊತ್ತಾಗಬೇಕು. ಎರಡನೆಯದು, ಅವರು ಸದನಕ್ಕೆ ವಿಷಾದವನ್ನು ವ್ಯಕ್ತಪಡಿಸಬೇಕು, ಹೇಳಬೇಕು. 'It was not my intention like this' Kshame has got a different cannotation, from what we see under 'vishadha'. ದಯಮಾಡಿ, ಸ್ವಲ್ಪ ಹೊತ್ತು ಸದನವನ್ನು ಮುಂದಕ್ಕೆ ಹಾಕಿ..

ಎಲ್ಲಾ ಪಕ್ಷಗಳನ್ನು ತಾವು ನಂಬಿಕೆಗೆ ತೆಗೆದುಕೊಂಡರೆ ಒಳ್ಳೆಯದೇನೋ ಎಂದು ನನಗನ್ನಿಸುತ್ತಿದೆ. ಯಾರ ಮನಸ್ಸಿನಲ್ಲೂ ಇದು ಉಳಿಯುವುದು ಬೇಡ. ತಾವು ನಮ್ಮ ಬಗ್ಗೆ ಬಹಳ ಒಳ್ಳೆಯ ಅಭಿಪ್ರಾಯ ಇಟ್ಟುಕೊಂಡಿದ್ದೀರಿ. ಆ ರೀತಿ ತಪ್ಪಾಗಿ ತಾವು ಎಂದೆಂದೂ ತಿಳಿದು ನಾನು ಈಗಲೂ ಕೂಡ ಅದೇ ಭಾವನೆ ಇಟ್ಟುಕೊಂಡಿದ್ದೇನೆ. ಆದರೆ, ಮಾನ್ಯ ಮುಖ್ಯ ಮಂತ್ರಿಗಳ ಹೇಳಿಕೆಯನ್ನು ನಾವು ಕೇಳಿದ ತಕ್ಷಣ ಮುಕ್ತಾಯವಾಗುವ ರೀತಿ ಕಾಣುತ್ತಿಲ್ಲ. We cannot accept the position of the matter as it has now happened after you took certain decision in your chamber. ಮತ್ತೆ ಎಲ್ಲಿ ಬೇರೆ ಬೆಳವಣಿಗೆಯಾಗುವುದರಿಂದ ಇದನ್ನು ಒಪ್ಪುವುದಕ್ಕೆ ಆಗುವುದಿಲ್ಲ ಕ್ಷಮಿಸಬೇಕು. ತಾವು ಏನೇ ಆದೇಶ ಕೊಟ್ಟರೂ ನಾವು ಅದನ್ನು ಒಪ್ಪುತ್ತೇವೆ ಎನ್ನುವುದು ಗೌರವದ ಮಾತು. ನಿಮಗೆ ಗೌರವ ಕೊಟ್ಟರೆ ನಮ್ಮನ್ನು ನಾವೇ ಈ ಸದನದಲ್ಲಿ ಗೌರವ ಮಾಡಿಕೊಂಡ ಹಾಗೆ. ದಯವಿಟ್ಟು ಸಭೆಯನ್ನು 5-10 ನಿಮಿಷ ಮುಂದಕ್ಕೆ ಹಾಕಿ, ಮಾನ್ಯ ವಿರೋಧ ಪಕ್ಷದ ನಾಯಕರು ಇದ್ದಾರೆ ಮತ್ತು ಎಲ್ಲಾ ಪಕ್ಷದ ನಾಯಕರನ್ನು ಕರೆದು ಮತ್ತು ಮಾನ್ಯ ಸಭಾ ನಾಯಕರನ್ನು ಹಾಗೂ ಸಂಸದೀಯ ಸಚಿವರನ್ನು ಕರೆದು ಮಾತನಾಡಿದರೆ ಇದು ಸರಿ ಹೋಗಬಹುದೆಂದು ನನ್ನ ವಿಚಾರ. ಇದಕ್ಕಿಂತ ಹೆಚ್ಚಿಗೆ ನಾನು ಹೇಳುವುದಿಲ್ಲ.

+ ಶ್ರೀ ಹೆಚ್.ಡಿ. ದೇವೇಗೌಡ : ಮಾನ್ಯ ಅಧ್ಯಕ್ಷರೆ, ತಾವು ಈ ಸದನದಲ್ಲಿ ಕಾರ್ಯಕಲಾಪ ಸುಗಮವಾಗಿ ನಡೆಯಬೇಕೆಂಬ ಒಂದೇ ಕಾರಣದಿಂದ, ತಾವೇನು ನಿರ್ಣಯವನ್ನು ನಮ್ಮನ್ನೆಲ್ಲಾ ಕರೆಯಿಸಿ ತೆಗೆದುಕೊಂಡಿರಿ, ಆ ಸಂದರ್ಭದಲ್ಲಿ ಈ ಸದನದ ಇನ್ನು ಕೆಲವು ಹಿರಿಯ ಮುಖಂಡರುಗಳನ್ನು ಕರೆಸತಕ್ಕಂಥಾದ್ದರಲ್ಲಿ ಸ್ವಲ್ಪಮಟ್ಟಿಗೆ ಲೋಪ ಆಗಿದೆ, ನಾನು ಈ ಸಂದರ್ಭದಲ್ಲಿ ಸಭಾನಾಯಕನಾಗಿ ಆ ಲೋಪವನ್ನು ಒಪ್ಪಿಕೊಳ್ಳುತ್ತೇನೆ, ಕ್ಷಮೆ ಕೇಳಲಿಕ್ಕೆ ಸಿದ್ಧನಿದ್ದೇನೆ. ತಾವೇನು ನಿರ್ಣಯ ಕೊಟ್ಟಿರಿ, ಆ ನಿರ್ಣಯಕ್ಕೆ ನಾನು ತಲೆಬಾಗುವುದಕ್ಕೆ ಸಿದ್ಧನಿದ್ದೇನೆ. ಮಾನ್ಯ ಬಂಗಾರಪ್ಪನವರು ಹೇಳಿದಂತಹ ಮಾತು ಸತ್ಯ ಇದೆ. ನೋ ಕಾನ್‌ಫಿಡೆನ್ಸ್ ಮೋಷನ್ ಸರಕಾರದ ವಿರುದ್ಧ ಮಾತು ಸತ್ಯ ಇದೆ. ನೋ ಕಾನ್‌ಫಿಡೆನ್ಸ್ ಮೋಷನ್ ಸರಕಾರದ ವಿರುದ್ಧ ಬಂದಾಗ, ಯಾವುದೋ ಒಂದು ಅಹಿತಕರವಾದ ಘಟನೆಯನ್ನೇ ಮುಂದಿಟ್ಟು, ಅದರಿಂದ ಸರಕಾರ ಈ ಅವಿಶ್ವಾಸ ನಿರ್ಣಯವನ್ನು ಎದುರಿಸತಕ್ಕಂಥಾದ್ದಕ್ಕೆ, /ಈ ಒಂದು ಕುಂಟು ನೆಪದಿಂದ ದೂರ ಸರಿದರು ಎಂದು ಹೇಳುವುದಕ್ಕೆ ಅವಕಾಶ ಸಿಕ್ಕಲಿಲ್ಲವೆಂದು ಅಭಿಪ್ರಾಯ ಸಾರ್ವಜನಿಕರಲ್ಲಿ ಮೂಡಬಾರದು ಎಂದು, ನಾನು ತಾವು ಕೊಟ್ಟಂತಹ ತೀರ್ಪಿಗೆ ಒಪ್ಪಿದ್ದೇನೆ. ಆದರೆ ಒಂದು ನನ್ನ ಮನಸ್ಸಿಗೆ ನೋವಾಗಿದೆ.

ನಿನ್ನೆ ತಾವು ಎಲ್ಲಾ ಮಾಹಿತಿಗಳನ್ನು ಕೊಡಿ ಎಂದು ನಾಲ್ಕಾರು ಸಾರಿ ಹೇಳಿದಿರಿ. ಬಹುಶಃ ಆ ಸಂದರ್ಭದಲ್ಲಿ ಅವರ ಹತ್ತಿರ ಮಾಹಿತಿಗಳು ಇಲ್ಲದೇ ಇರಬಹುದು. ನಿನ್ನೆ ಕೊಡಲಿಲ್ಲವೆನ್ನುವುದು ನಾನು ದೋಷ ಮಾಡುತ್ತಿಲ್ಲ, ನಾನು ಆರೋಪ ಕೂಡ ಮಾಡುವುದಿಲ್ಲ. ಸಂಬಂಧಪಟ್ಟ ದಾಖಲಾತಿಗಳು ಈ ಸಂದರ್ಭದಲ್ಲಿ ಅವರ ಹತ್ತಿರ ಇಲ್ಲದೇ ಇರಬಹುದು ಸಾಧ್ಯವಾಗದೇ ಇರಬಹುದು. ದಾಖಲಾತಿಗಳನ್ನು ಅವರೇ ಇಡುತ್ತಾರೆ. ಸಸ್ಪೆನ್‌ಷನ್ ಮುಚ್ಚಿ ಹಾಕಿರುವುದು ಎಲ್ಲಾ ನಾನು ಅದರ ಬಗ್ಗೆ ವಿವರಕ್ಕೆ ಹೋಗುವುದಿಲ್ಲ. ಈಗ ನಿಮಗೆ ದಾಖಲಾತಿ ಕೊಟ್ಟಿದ್ದಾರೆ. ಅದು ನಿಮ್ಮ ಕಸ್ಟಡಿಯಲ್ಲಿ ಇದೆ. ನೀವು ಸಭೆಯ ಮುಂದೆ ಅದನ್ನು ಹೇಳುವವರೆಗೆ I don't think it will become the custody of the House. It is in your custody now.

ತಾವು ಅದನ್ನು ಎಕ್ಸಾಮಿನ್ ಮಾಡಬೇಕಾಗುತ್ತದೆ. ಮಾನ್ಯ ವಿರೋಧ ಪಕ್ಷದ ನಾಯಕರು ದಾಖಲಾತಿಗಳನ್ನು ಕೊಟ್ಟ ಮೇಲೂ ಕೂಡ, ಅವರಿಂದ ವಿಷಾದ ವ್ಯಕ್ತಪಡಿಸುವುದು ಸರಿಯಾದ್ದಲ್ಲ ಎನ್ನುವ ಅಭಿಪ್ರಾಯ ಸಾರ್ವಜನಿಕರಲ್ಲೂ ಮೂಡುತ್ತದೆ. ಈ ಸದನದ ನಡವಳಿಕೆಗೂ ಅದು ಒಂದು ರೀತಿ ಅಪಾಯ ಬರುತ್ತದೆ. ದಾಖಲಾತಿಗಳನ್ನು ಕೊಟ್ಟ ಮೇಲೆ there is no need for him to express his regrets. ಅದು ಯಾವುದೇ ತರಹ ಆಗಿರಲಿ. ಅದು ಸರಿಯೆ ತಪ್ಪೇ ಎಂದು ವ್ಯಾಖ್ಯಾನ ಮಾಡಲಿಕ್ಕೆ ಹೋಗುವುದಿಲ್ಲ. ಈ ಸಭೆ ಕಾರ್ಯಕಲಾಪ ಮುಂದುವರಿಯಬೇಕೆಂಬುದು ನನ್ನ ಆಸೆ. ಮಾನ್ಯ ಖರ್ಗೆಯವರಲ್ಲಿ, ಮಾನ್ಯ ಬಂಗಾರಪ್ಪನವರಲ್ಲಿ ವಿನಂತಿ ಮಾಡುತ್ತೇನೆ, ಸಣ್ಣ ರಾಜಕೀಯ ಪಕ್ಷದಲ್ಲಿ ಒಬ್ಬೊಬ್ಬರೇ ಬಂದಿರಬಹುದು ಅಣ್ಣಾಡಿ ಎಂ ಕೆ ಇರಬಹುದು, ಖಮರುಲ್ ಇಸ್ಲಾಂ ಇರಬಹುದು ಸಿಪಿಐ ಎಂ ಇರಬಹುದು ನಾನು ಎಲ್ಲರಲ್ಲೂ ವಿನಂತಿ ಮಾಡುತ್ತೇನೆ. ಸಭೆಯ ಕಾರ್ಯಕಲಾಪ ನಡಯಬೇಕು. ಈ ಸರಕಾರದ ಇಚ್ಛೆ ಕೂಡ ಇದಾಗಿದೆ. ಈ ಸರಕಾರ ಅವಿಶ್ವಾಸ ನಿರ್ಣಯವನ್ನು ಎದುರಿಸಲಿಕ್ಕೆ ಸಿದ್ಧವಿಲ್ಲದೆ, ಇದನ್ನು ಮುಂದೆ ಹಾಕಲಿಕ್ಕೆ ಪ್ರಯತ್ನ ಮಾಡಿದರು ಎನ್ನುವ ಅಪಾದನೆಗೆ ನಾನು ಅಥವಾ ನನ್ನ ಸಹೋದ್ಯೋಗಿಗಳು ಗುರಿಯಾಗುವುದಕ್ಕೆ ಸಿದ್ಧ ಇಲ್ಲ. ಆದರೆ ತಮ್ಮಲ್ಲಿ ಒಂದು ವಿನಂತಿ ಮಾಡುತ್ತೇನೆ, ಸಭೆಯ ಕಾರ್ಯಕಲಾಪ ಮುಂದುವರಿಯಲಿ, ತಾವು ತಮ್ಮಲ್ಲಿರತಕ್ಕಂತಹ ದಾಖಲಾತಿಗಳು ಏನು ಇವೆ ಅವರು ಕೊಟ್ಟಿದ್ದನ್ನು ಪರಿಶೀಲನೆ ಮಾಡುವುದು, ಬಾಕಿ ಎಲ್ಲಾ ಪಕ್ಷದವರನ್ನು ಕರೆಯಿಸಿ ವಿಚಾರ ಮಾಡಿ ಒಂದು ಕನ್ಸಿಡರ್ಡ್ ರೂಲಿಂಗ್ ಕೊಡಬೇಕು. ಇದು ಈ ದಿನದ ಅಂತ್ಯದಲ್ಲಿ ಆಗಬಹುದು ನಾಳೆ ಬೆಳಿಗ್ಗೆ ಆಗಬಹುದು ತಾವು ದಯಮಾಡಿ ಕೊಡಬೇಕೆಂದು ವಿನಂತಿ ಮಾಡುತ್ತೇನೆ. ಸಭೆಯ ಕಾರ್ಯಕಲಾಪ ಮುಂದುವರೆಸಿ ಎಂದು ನಾನು ಎಲ್ಲರಲ್ಲೂ ವಿನಂತಿ ಮಾಡುತ್ತೇನೆ.

ಅಧ್ಯಕ್ಷರು : ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಈ ಸಭೆಯ ಪ್ರಾರಂಭದಲ್ಲಿ ಕೆಲವು ಮಾತುಗಳನ್ನು ಹೇಳಿದ್ದಾರೆ. ಅವರ ಮಾತಿನ ಒಟ್ಟು ಉದ್ದೇಶ, ಸ್ಥಗಿತಗೊಂಡು ಸಂದಿಗ್ಧತೆಯಿಂದ ಪಾರಾಗಿ ಕಲಾಪವನ್ನು ಮುಂದುವರಿಸಿಕೊಂಡು ಹೋಗಬೇಕೆನ್ನುವುದು ಮಾತ್ರ ಆಗಿತ್ತು. ಸನ್ಮಾನ್ಯ ಖರ್ಗೆಯವರು ಯಾರ ಮಾತುಗಳನ್ನು ವ್ಯಕ್ತಮಾಡಿದ್ದಾರೆ. ಅದನ್ನು ನಾನು ಯಾವುದೇ ಸಂಕೋಚವಿಲ್ಲದೆ, ಪ್ರತಿಷ್ಠೆಯ ಮೇಲೆ ನಿಲ್ಲದೆ, ಸಂಪೂರ್ಣವಾಗಿ ಆ ಮಾತುಗಳನ್ನು ಒಪ್ಪಿಕೊಳ್ಳುತ್ತೇನೆ. ಮಾನ್ಯ ಸಭಾನಾಯಕರು ಲೋಪವಾಗಿದೆ, ನಾನು ಕ್ಷಮೆ ಬೇಕಾದರೆ ಕೇಳುತ್ತೇನೆ ಎಂದು ಹೇಳಿದರು. ಅದು ಸಭಾ ನಾಯಕರು ಕರೆದ ಸಭೆ ಅಲ್ಲ. ನಾನು ನಿನ್ನೆ ನಡೆದಂತಹ ಒಂದು ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು, ಮಾನ್ಯ ವಿರೋಧ ಪಕ್ಷದ ನಾಯಕರನ್ನು ಮತ್ತು ಅವರ ಪಕ್ಷಕ್ಕೆ ಸೇರಿದ ಹಿರಿಯ ಮುಖಂಡರುಗಳನ್ನು 2-3 ಸದಸ್ಯರನ್ನು ಮಾತು ಕರೆಯಿಸಿ ಮಾತನಾಡಿದೆ. ಪ್ರತ್ಯೇಕವಾಗಿ ಸನ್ಮಾನ್ಯ ಸಭಾನಾಯಕರು ಮತ್ತು ಅವರ ಸಹೋದ್ಯೋಗಿಗಳು ತಾವಾಗಿಯೇ ನನ್ನ ಕಚೇರಿಗೆ ಬಂದರು. ಏನು ಮಾಡೋಣ, ಮುಂದುವರಿಸಿಕೊಂಡು ಹೋಗಬೇಕಲ್ಲ ಎಂದು ಮಾತನಾಡಿದರು. ವ್ಯವಸ್ಥಿತವಾದಂತಹ ಒಂದು ಸಭೆಯನ್ನು ಏರ್ಪಾಡು ಮಾಡಿ, ಕೆಲವರನ್ನು ಆಯ್ದು ಕರೆದುಕೊಂಡು ಇನ್ನು ಕೆಲವರನ್ನು ಹೊರಗೆ ಬಿಡತಕ್ಕಂತಹ ಉದ್ದೇಶವಿರಲಿಲ್ಲ, ಆದರೂ ಹಿಂದಿನ ಪದ್ಧತಿಯನ್ನು ಗಮನಿಸಿದಾಗ, ಈ ರೀತಿ ಸಂದಿಗ್ಧತೆ ಉಂಟಾದಾಗ ಎಲ್ಲಾ ಮುಖಂಡರುಗಳನ್ನು ಕರೆಯಿಸಿ ನಡೆಸಿಕೊಂಡು ಹೋಗತಕ್ಕಂತಹ ಒಂದು ಪದ್ಧತಿ ಇತ್ತು.

ಈ ದಿವಸ ಆ ಪದ್ಧತಿಯಿಂದ ದೂರ ಸರಿದಿದ್ದಕ್ಕೆ ನನ್ನ ಮನಸ್ಸಿಗೆ ನಾನು ಮಾಡಿದಂತಹ ಲೋಪವೇನು ಇವೆ, ಅದರ ಅರಿವು ಆಗಿದೆ. ಮುಂದೆ ಇಂತಹ

ಸಂದರ್ಭವುಂಟಾದಾಗ, ಇದಕ್ಕೆ ಅವಕಾಶ ನಾನು ಕೊಡುವುದಿಲ್ಲವೆನ್ನುವ ಮಾತನ್ನು ಹೇಳುತ್ತಿದ್ದೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ನನ್ನ ಕಚೇರಿಗೆ ಬಂದು ಮಾತನಾಡಿದಾಗ, ಏನು ರಾಜಿಯಾಯಿತು ಏನು ಸೂತ್ರ ಮಾಡಿದಿರಿ ಯಾರಿಗೆ ರಾಜಿ ಮಾಡಿಸಿದಿರಿ ಎನ್ನತಕ್ಕಂತಹ ಮಾತನ್ನು ಸನ್ಯಾಯ ಖರ್ಗೆಯವರು ಪ್ರಸ್ತಾಪ ಮಾಡಿದರು. ಜಗಳ ಬಿಡಿಸುವುದು ರಾಜಿ ಮಾಡುವುದು ಇಲ್ಲಿ ಉದ್ದೇಶ ಅಲ್ಲ. ಸಂದಿಗ್ಧತೆ ಉಂಟಾದಾಗ ಕಲಾಪ ಸ್ಥಗಿತಗೊಳ್ಳಬಾರದು, ಅದನ್ನು ಮುಂದುವರಿಸಿಕೊಂಡು ಹೋಗಬೇಕು ಸದನದ ಕಲಾಪ ನಡೆಸತಕ್ಕಂತಹ ಸಂದರ್ಭದಲ್ಲಿ ಈ ರೀತಿಯ ಸನ್ನಿವೇಶ ಉಂಟಾಗತಕ್ಕಂಥಾದ್ದು ಸಂಸದೀಯ ಪ್ರಜಾಪ್ರಭುತ್ವಕ್ಕೆ ಹೊಸದೇನಲ್ಲ. ಇದಕ್ಕಿಂತಲೂ ಭೀಕರವಾದ ಬಿಕ್ಕಟ್ಟುಗಳು ಬಂದಿವೆ. ತಾವೆಲ್ಲರೂ ಕೂಡ ನನಗಿಂತ ಹಿರಿಯರು ಇದ್ದೀರಿ, ತಮಗೂ ಅನುಭವ ಇದೆ. ಆ ಉದ್ದೇಶದಿಂದ ಅವರನ್ನು ಸಂಪರ್ಕ ಮಾಡಿ ಮಾತನಾಡಿನದೇ ಹೊರತು ಮತ್ತೇನೂ ಅಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು, ನನ್ನ ಕೈ ಬಲಪಡಿಸುತ್ತಾರೆಂದು ನಾನು ಭಾವಿಸಿದ್ದೆ.

ಅವರು ಒಂದು ಹಂತದವರೆಗೆ ಅದನ್ನು ಮಾಡಿದ್ದಾರೆ. ತಮ್ಮ ಮನಸ್ಸಿನಲ್ಲಿದ್ದಂತಹ ಭಾವನೆಗಳನ್ನು ವ್ಯಕ್ತ ಮಾಡಿ ಅದನ್ನು ಅಲ್ಲಿಗೆ ಕೈಬಿಟ್ಟಿದ್ದರೆ ಬಹಳ ಚೆನ್ನಾಗಿತ್ತು. ಅವರು ಒಂದು ಹೆಜ್ಜೆ ಮುಂದೆ ಹೋಗಿ ದಾಖಲೆಗಳನ್ನು ಕೊಟ್ಟಿರುವುದರಿಂದ, ಆ ದಾಖಲೆಗಳಲ್ಲಿ ಏನು ಅಡಕವಾಗಿದೆ ಅವರು ಮಾಡಿರತಕ್ಕಂತಹ ಆಪಾದನೆಗಳನ್ನು ಅದು ಎಷ್ಟರಮಟ್ಟಿಗೆ ಸಾಬೀತು ಮಾಡುತ್ತದೆ, ಸ್ಥಿರಪಡಿಸುತ್ತದೆ ಎನ್ನತಕ್ಕಂಥಾದ್ದನ್ನು ನಾನು ದಾಖಲೆಗಳನ್ನು ನೋಡಿ ನಿರ್ಣಯಕ್ಕೆ ಬರಬೇಕಾಗುತ್ತದೆ. ಮಾನ್ಯ ಸಭಾನಾಯಕರು ಹೇಳಿದಂತೆ ನಾನು ನನ್ನ ತೀರ್ಪನ್ನು ಕಾಯ್ದು ಇರಿಸುತ್ತಿದ್ದೇನೆ. ಸದನದ ಕಲಾಪ ನಿನ್ನೆ ಎಲ್ಲಿಗೆ ನಿಂತಿತ್ತು, ಅಲ್ಲಿಂದ ಮುಂದುವರಿಸಿಕೊಂಡು ಹೋಗುವುದಕ್ಕೆ ಸಂದಿಗ್ಧತೆಯಿಂದ ಪಾರಾಗಬೇಕು ಎನ್ನುವ ಕಾರಣಕ್ಕೆ ಪ್ರಶ್ನೋತ್ತರವನ್ನು ತಡೆಹಿಡಿದು ಈ ಒಂದು ಸಂದಿಗ್ಧತೆಯಿಂದ ಪಾರಾಗಬೇಕು ಎಂದು ಹೇಳಿ ಚರ್ಚೆಗೆ ತೆಗೆದುಕೊಂಡಿದ್ದೆವು. ಈಗ ನಮ್ಮ ದೈನಂದಿನ ಕಲಾಪ ಏನು ಇದೆ, ಅದರಂತೆ ನಡೆದುಕೊಂಡು ಹೋಗಬೇಕಾಗುತ್ತದೆ. ಪ್ರಶ್ನೋತ್ತರವನ್ನು ನಾವು ಕೈಗೆ ತೆಗೆದುಕೊಳ್ಳುತ್ತಿದ್ದೇವೆ, ದಯಮಾಡಿ ಎಲ್ಲಾ ಸದಸ್ಯರೂ ಸಹಕರಿಸಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

ಡಾ॥ ಯು.ಆರ್. ಚಿತ್ತರಂಜನ್ : ಮಾನ್ಯ ಅಧ್ಯಕ್ಷರೇ, ನಾವು ಅವಿಶ್ವಾಸವನ್ನು ವ್ಯಕ್ತಪಡಿಸಿರುವಾಗ ಈ ಪ್ರಶ್ನೆಗಳಿಗೆ ಕೊಟ್ಟಂಥ ಭರವಸೆಗಳಿಗೆ ಏನು ಸ್ಯಾಂಕ್ಷಿಟಿ ಇದೆ? ನೈತಿಕವಾಗಿ ಏನು ಇದೆ? ನಾವು ಸರ್ಕಾರದ ಮೇಲೆ ವಿಶ್ವಾಸವೇ ಇಲ್ಲ ಎಂದು ಹೇಳುತ್ತಿದ್ದೇವೆ. ಅವರೇನು ಪ್ರಶ್ನೋತ್ತರಗಳಿಗೆ ಭರವಸೆಯನ್ನು ಕೊಡುತ್ತಾರೆ, ಅದನ್ನು ನಾವು ಯಾವ ಆಧಾರದ ಮೇಲೆ ಒಪ್ಪಿಕೊಳ್ಳಬೇಕು?

ಶ್ರೀ ಜಿ.ಬಿ. ಶಿವಕುಮಾರ್ : ಮಾನ್ಯ ಅಧ್ಯಕ್ಷರೇ, ಮತ್ತೆ ಹಳೆಯ ದಾಟಿಯೇ? ನೀವೇನು ಸುಮಧುರ ವಾತಾವರಣವನ್ನು ಕಲ್ಪನೆ ಮಾಡಿ ಸಭೆಯನ್ನು ನಡೆಸಬೇಕು ಎಂದರೆ ಇವರೇಕೋ ಮತ್ತೆ ಹಳಿ ತಪ್ಪುವಂಥದ್ದನ್ನೇ ಮಾಡುತ್ತಾರೆ.

(ಗೊಂದಲ)

ಡಾ॥ ಯು.ಆರ್. ಚಿತ್ತರಂಜನ್ : ಮಾನ್ಯ ಅಧ್ಯಕ್ಷರೇ, ನಾನು ಮತ್ತೊಮ್ಮೆ ವಿನಂತಿ ಮಾಡಿಕೊಳ್ಳುತ್ತೇನೆ, ಈ ಪ್ರಶ್ನೋತ್ತರ ಕಾಲವನ್ನು ತಡೆಹಿಡಿಸಿ, ಅವಿಶ್ವಾಸವನ್ನೇ ಮುಂದುವರೆಸಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ತಾತ್ವಿಕವಾಗಿ ತಾವು ಪ್ರಸ್ತಾಪ ಮಾಡಿರುವ ವಿಚಾರ ಯೋಗ್ಯವಾದುದಾದರೂ ಕೂಡ ಈ ಆಲೋಚನೆಯನ್ನು ನೀವು ನಿನ್ನೆ ಮಾಡಬೇಕಾಗಿತ್ತು. ತಮಗೆ ಏನು ಹೇಳುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ನಮ್ಮ ನಿಯಮಾವಳಿಗಳ ಪ್ರಕಾರ ನಾವೆಲ್ಲಾ ಅದನ್ನು ಪರಿಶೀಲನೆ ಮಾಡಿ, ನಿನ್ನೆ ಅವಿಶ್ವಾಸ ನಿರ್ಣಯವನ್ನು ಮಂಡನೆ ಮಾಡುವಂಥ ಸಂದರ್ಭದಲ್ಲಿ ಈ ಒಂದು ಪ್ರಶ್ನೋತ್ತರವನ್ನು ರದ್ದುಮಾಡಿ ನಮಗೆ ಅವಕಾಶ ಕೊಡಿ ಎಂದು ಕೇಳಬೇಕಾದಂಥ ಒಂದು ಸಂದರ್ಭ ಇತ್ತು. ರೂಲ್ಸ್‌ನ್ನು ನೋಡಿದಾಗ ಕ್ವಶ್ಚನ್ ಅವರ್ ಆದ ಮೇಲೆ ಮಾತ್ರ ಇದನ್ನು ತೆಗೆದುಕೊಳ್ಳಬೇಕು ಎಂದು ಇದ್ದಿದ್ದರಿಂದ, ನಿನ್ನೆ ನಾವು ಕ್ವಶ್ಚನ್ ಅವರನ್ನು ನಿಲ್ಲಿಸಿ ಎಂದು ಹೇಳುವಂಥದ್ದು ಸರಿಯಲ್ಲ ಎಂದು, ಆ ಕೆಲಸಕ್ಕೆ ಕೈಹಾಕಲಿಲ್ಲ. ಮಾನ್ಯ ಅಧ್ಯಕ್ಷರೇ, ತಮ್ಮ ಗಮನಕ್ಕೆ ಒಂದು ಮಾತನ್ನು ತರುವುದಕ್ಕೆ ಇಚ್ಛಿಪಡುತ್ತೇನೆ. ನಿನ್ನೆ ಬಿಸಿನೆಸ್ ಅಡ್ವೈಸರಿ ಕಮಿಟಿ ನಡೆಯಿತು. ಆ ಕಡೆ ಈ ಕಡೆ ಇರುವಂಥ ಎಲ್ಲಾ ಹಿರಿಯರೂ ಇದ್ದರು. ಅಲ್ಲಿ ಮಾತನಾಡಬೇಕಾದರೆ ಏನು ಚರ್ಚೆಗೆ ಬಂತು. ಇವತ್ತು ಈ ಒಂದು ಅವಿಶ್ವಾಸ ನಿರ್ಣಯದ ಚರ್ಚೆಗೆ ಮುನ್ನ ಬೇರೆ ಯಾವುದೇ ಬಿಸಿನೆಸ್ ತೆಗೆದುಕೊಳ್ಳುವುದರಿಂದ ಆಗಸ್ಟ್ 15ನೇ ತಾರೀಖು ಆ ಮಹತ್ತರವಾದಂಥ ಒಂದು ರಾಷ್ಟ್ರಧ್ವಜವನ್ನು ಹಾರಿಸುವಂಥ ಕಾಲದಲ್ಲಿ ಮುಖ್ಯಮಂತ್ರಿಗಳು ಯಾವ ನೈತಿಕ ಹಕ್ಕನ್ನು ಇಟ್ಟುಕೊಂಡು ರಾಷ್ಟ್ರಧ್ವಜವನ್ನು ಹಾರಿಸಬಹುದು, ಇದು ಸರಿಯೇ? ಎಂದು ಸದಸ್ಯರುಗಳ ಮಧ್ಯೆ ಅಲ್ಲಿ ಚರ್ಚೆಯಾಯಿತು. ನೀವು ಅಧಿಕಾರದಲ್ಲಿ ಮುಂದುವರಿಯುವಂಥ ನೈತಿಕ ಹಕ್ಕನ್ನು ಕಳೆದುಕೊಂಡಿದ್ದೀರಿ, ಒಂದು ಕ್ಷಣ ನೀವು ಅಧಿಕಾರದಲ್ಲಿ ಮುಂದುವರಿಯಕೂಡದು ಎನ್ನುವಂಥ ಅತ್ಯಂತ ಪ್ರಮುಖವಾಗಿರುವಂಥ ಒಂದು ಅಸ್ತ್ರವನ್ನು ನಾವು ಪ್ರಯೋಗಮಾಡಿ, ಈ ಒಂದು ನೋ ಕಾನ್‌ಫಿಡೆನ್ಸ್‌ನ್ನು ಮೂವ್ ಮಾಡಿರುವಂಥ ಕಾಲದಲ್ಲಿ ಬೇರೆ ಯಾವುದೇ ಒಂದು ಕಾರ್ಯಕಲಾಪಕ್ಕೆ ನೀವು ಅವಕಾಶ ಮಾಡಿಕೊಟ್ಟರೆ, ಕ್ವೊಶ್ಚನ್ ಅವರ್‌ಗೆ ನೀವು ಅವಕಾಶ ಮಾಡಿಕೊಟ್ಟರೆ ಅದಕ್ಕೆ ಸ್ಯಾಂಕ್ಷಿಟಿ ಬರುವುದಿಲ್ಲ. ಅದು ಪದ್ಧತಿ ಅಲ್ಲ. ತಮ್ಮಂಥ ಹಿರಿಯರು ಆ ಸ್ಥಾನದಲ್ಲಿ ಕುಳಿತಾಗ ತಾವು ಪರಾಂಬರಿಸಿ. ಬಹುಶಃ ನಮ್ಮ ಕಾನೂನು ಮಂತ್ರಿಗಳು ಇದ್ದಾರೆ, ಮತ್ತೊಬ್ಬರು ಇದ್ದಾರೆ. ದಯಮಾಡಿ ಇದಕ್ಕೆ ಅವಕಾಶ ಮಾಡಿಕೊಡಬೇಡಿ ಎಂದು ಅತ್ಯಂತ ವಿನಯದಿಂದ ನಾನು ಪ್ರಾರ್ಥನೆ ಮಾಡುತ್ತೇನೆ;

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಆ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ನಾವೆಲ್ಲರೂ ಕೂಡ ಇದ್ದೇವೆ. ಮೊಯಿಲಿಯವರು, ಕೌಜಲಗಿಯವರು, ಬಂಗಾರಪ್ಪನವರು, ವಾಟಾಳ್ ನಾಗರಾಜ್‌ರವರು ಕೂಡ ಇದ್ದರು. ಕ್ವಶ್ಚನ್ ಅವರ್‌ನ್ನು ಸಸ್ಪೆಂಡ್ ಮಾಡಬೇಕು ಎನ್ನುವಂಥ ಪ್ರಶ್ನೆ ಬಂದಿಲ್ಲ. ಒಂದು ವೇಳೆ ಅವರು ಹೇಳುವುದು ಸರಿ ಇದ್ದರೆ, ಅವರೊಬ್ಬರೇ ಇದನ್ನು ಹೇಳುತ್ತಿದ್ದಾರೆ. ಅದು ಸರಿ ಇದ್ದರೆ ಸ್ಪೀಕರ್‌ರವರು ಅಜೆಂಡಾದಲ್ಲಿ ಪ್ರಶ್ನೆಗಳನ್ನು ಹಾಕುತ್ತಿರಲಿಲ್ಲ. ಆ ನಿರ್ಣಯವೇನಾದರೂ ಆಗಿದ್ದರೆ. ಅಜೆಂಡಾದಲ್ಲಿ ಕ್ವಶ್ಚನ್ ಅವರನ್ನು ಹಾಕುತ್ತಿರಲಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ನಿರ್ಣಯವಾಗಿಬಿಟ್ಟೆ ಏನಾದರೂ ಹೇಳಿದೆನೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಮಗೆ ಮಾತನಾಡುವುದಕ್ಕೆ ಬಿಡುವುದಿಲ್ಲವಲ್ಲ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ನಿರ್ಣಯವಾಗಿದೆ ಎಂದು ಏನೂ ಹೇಳಿಲ್ಲ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಬರಗಾಲದಲ್ಲಿ ಬಾಯಿ ಇದ್ದವನು ಬದುಕುತ್ತಾನೆ ಎನ್ನುವ ಹಾಗೆ ಆಗಿದೆ. ನಾವು ನಿಂತರೂ ಕೂಡ ಸೌಜನ್ಯ ಇಲ್ಲದೆ ಮಾತನಾಡುತ್ತಾರೆ ಎಂದರೆ ಹೇಗೆ? ಇಲ್ಲದೆ ಏನು ಹೇಳುವುದು.

ಅಧ್ಯಕ್ಷರು : ನಿಮ್ಮದು ಬಾಯಿ ದೊಡ್ಡದು ಇದೆ ಎಂದು ನಿನ್ನೆ ನಾವು ಒಪ್ಪಿಕೊಂಡಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾವು ಅಕೇಷನಲಿ ತೆರೆಯುತ್ತೇವೆ. ತೆರೆದರೆ ನುಂಗುತ್ತೇವೆ.

ಅಧ್ಯಕ್ಷರು : ಬಾಯೇ ಇಲ್ಲದವರಿಗೆ ಕಷ್ಟ, ಅಷ್ಟೇನೆ.

ಶ್ರೀ ಜೆ.ಹೆಚ್. ಪಟೇಲ್ : ಸಧ್ಯ ನಮ್ಮನ್ನು ನುಂಗಬೇಡ್ರಪ್ಪ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಿಮ್ಮನ್ನು ನುಂಗುವುದಕ್ಕೆ ನಾವು ಹುಟ್ಟಿದ್ದು ಈಗ. ನಿನ್ನೆ ಆ ಪ್ರಶ್ನೆ ಬರಲಿಲ್ಲ. ಏಕೆಂದರೆ ಬೇರೆ ಬಿಸಿನೆಸ್ ಎಂದರೆ ಬೇರೆ ಅಡ್ಜರ್ನ್‌ಮೆಂಟ್ ಮೋಷನ್, ಅದು, ಇದು, ಅಥವಾ ಡ್ರಾಟ್ ಬಗ್ಗೆ ಚರ್ಚೆಗೆ ತೆಗೆದು ಕೊಳ್ಳುವುದು ಬೇಡ, ವೋಟ್ ಆಫ್ ನೋ ಕಾನ್‌ಫಿಡೆನ್ಸ್ ಏನು ಇದೆ, ಅದು ನಡೆಯಲಿ ಎಂದು. ಕ್ವಶ್ಚನ್ ಅವರ್‌ನ್ನು ಸಸ್ಪೆಂಡ್ ಮಾಡಿ ಇದನ್ನೇ ನಡೆಸಬೇಕು ಎನ್ನುವುದಲ್ಲ, ಅದಕ್ಕೆ ತಾವೇನು ಮಾಡಿದಿರಿ. 11 ಗಂಟೆಗೆ ಇವುವಂಥದ್ದನ್ನು 10 ಗಂಟೆಗೆ ಹಾಕಿ 10 ರಿಂದ 11ಕ್ಕೆ ಇದನ್ನು ಮುಗಿಸಿ ಯಥಾಪ್ರಕಾರ ಅಂದರೆ ಎಷ್ಟು ತಾಸು ಈ ನಮ್ಮ ಚರ್ಚೆಗೆ ಬೇಕು, ಅದು ಅವೇಲಬಲ್ ಇರುತ್ತದೆ ಎನ್ನುವ ದೃಷ್ಟಿಯಿಂದ ಅದನ್ನು ಮಾಡಿದ್ದುದು. ಈಗೇನಾಯಿತು, ತಾವು ಹೇಳುತ್ತಿದ್ದೀರಿ, ನಾವು ಇಕ್ಕಟ್ಟಿಗೆ ಸಿಕ್ಕಿಕೊಂಡು ಬಿಟ್ಟಿದ್ದೇವೆ. ಕ್ವಶ್ಚನ್ ಅವರ್‌ನ್ನು ಸ್ಟಾರ್ಪ್ ಮಾಡಿ ಎಂದು ತಾವು ಹೇಳಿದಿರಿ. ಆದರೆ, ಇವತ್ತು ವೋಟ್ ಆಫ್ ನೋ ಕಾನ್‌ಫಿಡೆನ್ಸ್‌ನ್ನು ಅವರು ಮೂವ್ ಮಾಡಿದ್ದಾರೆ. ಅವರು 40 ಜನ ಇದ್ದರೆ ಈ ಕಡೆಯೂ 40-50 ಜನ ಕ್ವಶ್ಚನ್ ಕೇಳುವವರು ಇದ್ದಾರೆ. ಈಕ್ವಲಿ ಅದೇ ನಂಬರ್‌ನಲ್ಲಿದ್ದಾರೆ. ಒಬ್ಬರಿಗೆ ನೋ ಕಾನ್‌ಫಿಡೆನ್ಸ್‌ನಲ್ಲಿ ಆಸಕ್ತಿ ಇದ್ದರೆ, ಈ ಗೌರ್ನಮೆಂಟ್ ಏನು ವಿಫಲಗೊಂಡಿದೆ, ಅಥವಾ ಅನೇಕ ಕೆಲಸ ಕಾರ್ಯಗಳಲ್ಲಿ ಇವರೇನು ಕೆಲಸ ಮಾಡಿಲ್ಲ, ಅದರ ಬಗ್ಗೆ ಕೇಳುವಂಥ ಪ್ರಶ್ನೆಗಳು ಇವೆ, ಅದರ ಬಗ್ಗೆ ಹೇಳುವಂಥ ಜನರೂ ಇದ್ದಾರೆ.

ಶ್ರೀ ಹೆಚ್.ಎನ್. ನಂಜೇಗೌಡ : ನೀವು ಗೌರ್ನಮೆಂಟ್ ಬಗ್ಗೆ ಕನ್‌ಫಿಡೆನ್ಸ್‌ನ್ನು ಎಕ್ಸ್‌ಪ್ರೆಸ್ ಮಾಡುವುದಿಲ್ಲವೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ಎಕ್ಸ್‌ಪ್ರೆಸ್ ಮಾಡುತ್ತೀರಿ. ನಾವಲ್ಲ, ಅದನ್ನು ಬಿಡಿ. ಈಗಲ್ಲ ಕೊಟ್ಟಾಯಿತಲ್ಲಾ, ಡಾಕ್ಯುಮೆಂಟ್ ಕೊಟ್ಟಿರಿ. ಕಾನ್‌ಫಿಡೆನ್ಸ್ ಎಕ್ಸ್‌ಪ್ರೆಸ್ ಮಾಡುತ್ತೀರೋ, ಬಿಡುತ್ತೀರೋ ನಿಮಗೆ ಗೊತ್ತು. ಏಕೆಂದರೆ ನಮ್ಮನ್ನೂ ಕರೆಸಿಲ್ಲವಲ್ಲ, ಅದಕ್ಕಾಗಿ ನನ್ನ ಕಳಕಳಿಯ ಮನವಿ, ತಾವು ಕ್ವಶ್ಚನ್ ಅವರನ್ನು ತೆಗೆದುಕೊಳ್ಳಿ. ಏಕೆಂದರೆ ಸುಮಾರು 10-15 ಸದಸ್ಯರು ಎಲ್ಲರೂ ಕೂಡ ಹೇಳುವ ಅವಕಾಶ ಸಿಗುತ್ತದೆ. ಇಲ್ಲದಿದ್ದರೆ ನಾಳೆ ಏನಾಗುತ್ತದೆ, ಇದು ಒಂದೇ ಪ್ರಶ್ನೆಯ ಮೇಲೆ ಪ್ರಶ್ನೆ ಉತ್ತರ ಕಾಲದಲ್ಲೂ ಕೂಡ ಅವರಿಗೆ ಅವಕಾಶ ಸಿಗಲಿಲ್ಲ ಎಂದರೆ ಮತ್ತೆ ಯಾವುದು? ಅಡ್ಜರ್ನ್‌ಮೆಂಟ್ ಮೊಷನ್ ಇಲ್ಲ, ಮತ್ತೆ ಯಾವುದಾದರೂ ಅರ್ಜೆಂಟ್ ಇಂಪಾರ್ಟೆಂಟ್ ಮ್ಯಾಟರ್ ಡಿಸ್ಕಷನ್ ಇಲ್ಲ, ಇಂಟರ್‌ಪ್ರೆಟ್ ಮಾಡುವ ಹಾಗೆ ಇಲ್ಲ, ಅಂದರೆ ಅವಕಾಶ ಬೇರೆ ಸದಸ್ಯರಿಗೆ ಇದಕ್ಕೆ ಬಿಟ್ಟು ಸಿಗುವುದೇ ಇಲ್ಲ, ಅಂದರೆ ದಿನಾ ಇಂಥದ್ದು ಒಂದೇ. ಅವರು ಮಾತನಾಡಿದರೆ ಎನ್ನುವ ಪ್ರಶ್ನೆ ಬರುತ್ತದೆ. ಬೇರೆ ಸದಸ್ಯರಿಗೂ ಅವಕಾಶ ಬೇಕಾಗಿದೆ. ಪ್ರಿವಿಲೇಜಸ್ ಇದೆ, ಅದನ್ನು

ದಯವಿಟ್ಟು ತಾವು ಕಟೆರೈಲ್ ಮಾಡಬೇಡಿ ಎಂದು ಕಳಕಳಿಯಿಂದ ತಮಗೆ ಕೇಳಿಕೊಳ್ಳುತ್ತೇನೆ. ಇದರ ಮೇಲೆ ತಾವು ಪುನಃ ಯೋಚನೆ ಮಾಡಬೇಕು ಎಂದು ಹೇಳಿ ನಾನು ಬೇಡಿಕೊಳ್ಳುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ಸಚಿವರು) : ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಮಿತ್ರರೂ ಆಗಿರತಕ್ಕಂಥ ಚಿತ್ತರಂಜನ್‌ರವರು ಇವತ್ತು ಈ ಒಂದು ಅವಿಶ್ವಾಸ ನಿರ್ಣಯದ ಬಗ್ಗೆ ಮಾತನಾಡುತ್ತಿರುವಂಥ ಸಂದರ್ಭದಲ್ಲಿ ಪ್ರಶ್ನೋತ್ತರ ಸಮಯವನ್ನು ಸ್ಥಗಿತ ಗೊಳಿಸಬೇಕು ಎಂದು ಅವರು ಕೇಳಿದ್ದಾರೆ. ತಾವು ಈ ವಿಚಾರದ ಬಗ್ಗೆ ತಮ್ಮ ಅನಿಸಿಕೆಗಳನ್ನು ಈಗಾಗಲೇ ವ್ಯಕ್ತಮಾಡಿದ್ದೀರಿ. ಕಾರಣ, ನಿನ್ನೆ ಅವಿಶ್ವಾಸ ನಿರ್ಣಯವನ್ನು ಮಂಡಿಸಬೇಕಾದರೆ ಪ್ರಶ್ನೋತ್ತರ ಅವಧಿಯಾದ ಮೇಲೆ ಆ ಕೆಲಸ ನಡೆಯಿತು. ಇದು ಒಂದು. ಎರಡನೆಯದು, ನಿನ್ನೆ ನಡೆದಿರುವ ಬಿಸಿನೆಸ್ ಅಡ್ವೈಸರಿ ಕಮಿಟಿ ಸಭೆಯಲ್ಲಿ ಇದರ ಬಗ್ಗೆ ಕೂಡ ಚರ್ಚೆಗೆ ಬಂದು ಪ್ರಶ್ನೋತ್ತರ ವೇಳೆ ಕಳೆದಾದ ಮೇಲೆ ಮಾತ್ರ ಇದನ್ನು ತೆಗೆದುಕೊಂಡು ಚರ್ಚೆ ಮಾಡಬೇಕೇ ವಿನಹ ಪ್ರಶ್ನೋತ್ತರವನ್ನು ಸ್ಥಗಿತಗೊಳಿಸಿ ನಮ್ಮ ಸದಸ್ಯರ ಹಕ್ಕನ್ನು ಮೊಟಕುಗೊಳಿಸಬಾರದು ಎಂದು ಹೇಳುವಂಥ ತೀರ್ಮಾನಕ್ಕೂ ಬಂದಿದ್ದೇವೆ. ನಮ್ಮ ನಿಯಮಾವಳಿಗಳನ್ನು ಕೂಡ ನೋಡಬಹುದು. ನಮ್ಮ ನಿಯಮಾವಳಿಯಲ್ಲಿ ನಮ್ಮ ನಿಯಮ 38ರ ಅನ್ವಯ ನಮ್ಮ ಸಭೆ ಶುರುವಾಗುವುದಕ್ಕೆ ಮೊದಲು ಒಂದು ಗಂಟೆ ಯಾವುದೇ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಮೊದಲು ಒಂದು ಗಂಟೆ ಪ್ರಶ್ನಾವಳಿ ಎಂದು ಹೇಳುವಂಥದ್ದೇ ನಮ್ಮ ನಿಯಮದಲ್ಲಿ ಇರುವಂಥದ್ದು. ಬಹುಶಃ ಆ ಒಂದು ನಿಯಮವನ್ನು ಕೂಡ ವಿರೋಧ ಪಕ್ಷದ ನಾಯಕರ ಗಮನಕ್ಕೂ ತರುತ್ತೇನೆ.

Rule 38 - "Unless the Speaker otherwise directs, the first Hour of every day of sitting shall be available for the asking and answering of questions."

ಆದರೆ ಈ ಒಂದು ನಿಯಮದಲ್ಲಿರುವಂಥ ಯಾವುದೇ ನಿಯಮವನ್ನು ತಮ್ಮ ಅನುಮತಿಯನ್ನು ಪಡೆದು, ಸಭೆಯ ಅನುಮತಿಯನ್ನು ಪಡೆದು ಅದನ್ನು ಸಸ್ಪೆಂಡ್ ಮಾಡುವುದಕ್ಕೆ ಅಧಿಕಾರ ಇದೆ. ಆದರೆ ಅದಕ್ಕೆ ಸಭೆಯ ಅನುಮತಿ ಬೇಕೇ ಬೇಕು. ಸಭೆಯ ಅನುಮತಿ ಪಡೆಯದೇ ಅದನ್ನು ಮಾಡುವುದಕ್ಕೇ ಅವಕಾಶವೇ ಇಲ್ಲ. ಸಸ್ಪೆಂಡಿಂಗ್ ಆಫ್ ದಿ ರೂಲ್ ಎಲ್ಲಿದೆ ಎಂದರೆ ನಿಯಮ 361ರ ಕೆಳಗಡೆ ಇದೆ. ನಿಯಮ 361ರ ಕೆಳಗಡೆ -

> "Any member may, with the consent of the Speaker, move that any rule may be suspended in its application to a particular motion before the House and if the motion is carried the rule in question shall be suspended for the time being."

ಇದರ ಅರ್ಥ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಎಲ್ಲಾ ಪಕ್ಷದ ನಾಯಕರುಗಳು ಸೇರಿ ಅಲ್ಲಿ ಒಂದು ತೀರ್ಮಾನವನ್ನು ತೆಗೆದುಕೊಂಡು ಆ ತೀರ್ಮಾನ ಸಭೆಗೆ ಬಂದು ಅದಕ್ಕೆ ತನ್ನ ಸಮ್ಮತಿಯನ್ನು ಕೊಟ್ಟಾಗ ನಾವು ಅದನ್ನು ಕಾರ್ಯರೂಪಕ್ಕೆ ತರಬಹುದು. ಆದರೆ ನಿನ್ನೆ ತೆಗೆದುಕೊಂಡಿರುವ ತೀರ್ಮಾನ ಒಂದು. ನಿನ್ನೆ ಕಲಾಪ ಈ ನಿರ್ಣಯವನ್ನು ತರುವುದಕ್ಕೆ ಮೊದಲೇ ನಾವು ಕ್ವಶ್ಚನ್ ಅವರ್‌ನ್ನು ಈಗಾಗಲೇ ತೆಗೆದುಕೊಂಡಿರುವುದರಿಂದ ಇವತ್ತೂ ಕೂಡ ಈ ಕ್ವಶ್ಚನ್ ಅವರನ್ನು ಸ್ಥಗಿತಗೊಳಿಸುವುದಕ್ಕೆ ಅವಕಾಶ ಇಲ್ಲ ಮಾನ್ಯ ಸಭಾಧ್ಯಕ್ಷರೇ. ಆದ್ದರಿಂದ ಪ್ರಶ್ನೋತ್ತರ ವೇಳೆಯನ್ನು

ಮುಂದೂಡಬೇಕೆಂದು ವಿರೋಧ ಪಕ್ಷದ ನಾಯಕರ ಇಚ್ಛೆಯಾದರೆ, ತಾವು ಅದನ್ನು ಮೋಷನ್ ಮುಖಾಂತರ ತರಬೇಕಾಗುತ್ತದೆ. ಸದನ ಅದಕ್ಕೆ ತನ್ನ ಅನುಮತಿಯನ್ನು ಕೊಡಬೇಕಾಗುತ್ತದೆ. ಇಲ್ಲದೇ ಹೋದರೆ ಅದಕ್ಕೆ ಕೊಡುವುದಕ್ಕಾಗುವುದಿಲ್ಲ.

ಅಧ್ಯಕ್ಷರು : ಈಗ ಆಯಿತು. ಪ್ರಶ್ನೋತ್ತರವನ್ನು ತೆಗೆದುಕೊಳ್ಳೋಣ.

(ಗೊಂದಲ)

ಶ್ರೀ ಎಂ. ನಾರಾಯಣಸ್ವಾಮಿ : ಮಾನ್ಯ ಸಭಾಧ್ಯಕ್ಷರೇ, ತಾವು ರೂಲಿಂಗನ್ನು ಕೊಟ್ಟಿದ್ದೀರಿ.

(ಗೊಂದಲ)

ಶ್ರೀ ವೈ. ರಾಮಕೃಷ್ಣ : ಮಾನ್ಯ ಅಧ್ಯಕ್ಷರೇ, ಅವರು ರೂಲ್‌ನ್ನು ಕೋಟ್ ಮಾಡಿದರು. 38ನೇ ನಿಯಮವನ್ನು ಅವರು ಓದಿದರು. ಅದರಲ್ಲಿ ತಮಗೆ ಅಧಿಕಾರ ಇದೆ. ನಾನು ರೂಲ್ ಕಡೆ ಹೋಗುತ್ತಿಲ್ಲ, ತಮಗೆ ಅಧಿಕಾರ ಇದೆ. ವೇಳೆ ಆಗಿದೆ. ಮಹತ್ವವಾದ ಪ್ರಶ್ನೆಗಳು ಇವೆ. ಈಗ ನಿನ್ನೆಯಿಂದ ತಾವು ಯಾವ ರೀತಿ ಹೇಳಿದ್ದೀರಿ, ಆ ರೀತಿ ನಾವು ನಡೆದುಕೊಂಡು ಹೋಗಿದ್ದೇವೆ. ಅದರಲ್ಲೂ ತಾವು ನೋಕಾನ್ ಫಿಡೆನ್ಸ್ ಅನ್ನು ಯಾವಾಗ ತೆಗೆದುಕೊಳ್ಳಬೇಕು ಎನ್ನುವುದನ್ನು ಕೂಡ ತಾವು ನೋಡಿದ್ದೀರಿ. ಈ ಮಹತ್ವದ ವಿಚಾರ ಇರುವಾಗ ಈಗ ವಿಷಯ ಬಹಳ ಮಹತ್ತರವಾಗಿರುವುದರಿಂದ ಮತ್ತು ಕಾನೂನಿನಲ್ಲಿ ಅವಕಾಶ ಇರುವುದರಿಂದ, ಇಲ್ಲದೇ ಇದ್ದರೆ ನಾನು ಕೇಳುತ್ತಿರಲಿಲ್ಲ, ರೂಲ್ 38ರಲ್ಲಿ ಅಧ್ಯಕ್ಷರು ಅನ್ಯಥಾ ನಿರ್ಧರಿಸದ ಹೊರತು ಎಂದು ಇದೆ, ಇದನ್ನು ತಾವು ಉಪಯೋಗಿಸಿಕೊಂಡು ದಯವಿಟ್ಟು ಕ್ವೆಶ್ಚನ್ ಅವರ್ ಅನ್ನು ಮನ್ನಾ ಮಾಡಬೇಕು.

ಶ್ರೀ ಸಿ.ಎಸ್. ಪುಟ್ಟೇಗೌಡ : ನನ್ನದು ಪಾಯಿಂಟ್ ಆಫ್ ಅರ್ಡರ್

ಅಧ್ಯಕ್ಷರು : ಈಗ ಪ್ರಶ್ನೋತ್ತರ ಮಾನ್ಯ ಸದಸ್ಯರಾದ ಶ್ರೀ ಟಿ.ಬಿ. ಜಯಚಂದ್ರ ಅವರು ಪ್ರಶ್ನೆ ಕೇಳಬೇಕು.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಹೇಮಾವತಿ ಯೋಜನೆ ಕುರಿತು

428 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಹೇಮಾವತಿ ಯೋಜನೆಯನ್ನು ರೂಪಿಸಿದಾಗ ಎಷ್ಟು ಎಕರೆಗಳಿಗೆ ನೀರುಣಿಸುವ ಯೋಜನೆಯನ್ನು ಸರ್ಕಾರದವರು ಅಂದಾಜು ಮಾಡಿ ಹಾಗೂ ಅದರಲ್ಲಿ ಅರೆ ನೀರಾವರಿ ಎಷ್ಟು ನೀರಾವರಿ ಎಷ್ಟು?*

ಆ) *ಇಲ್ಲಿಯವರೆಗೆ ಎಷ್ಟು ಎಕರೆಗೆ ನೀರು ಉಣಿಸಲಾಗುತ್ತಿದೆ ನೀರಾವರಿ ಎಷ್ಟು ಅರೆ ನೀರಾವರಿ ಎಷ್ಟು?*

ಇ) *ಮೊದಲ ಅಂದಾಜಿನಂತೆ ಇನ್ನು ಎಷ್ಟು ಎಕರೆಗೆ ನೀರು ಕೊಡುವುದು ಬಾಕಿ ಇದೆ ಹಾಗೂ ಈ ಯೋಜನೆ ಪೂರ್ಣಗೊಳಿಸಲು ಇನ್ನು ಎಷ್ಟು ಅವಧಿ ಬೇಕಾಗುವುದು.*

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :